ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 ಸಂಚಿಕೆ 46 ನವೆಂಬರ್ 16, 1980 ಬೆಲೆ : 50 ಪೈಸೆ

ಇಂದಿರಾ ಆಕ್ರೋಶ

ಕೇರಳ ರಾಜ್ಯಕ್ಕೆ ಭೇಟಿ ಇತ್ತಿದ್ದ ಸಂದರ್ಭದಲ್ಲಿ ಇಂದಿರಾ ಗಾಂಧಿಯವರು ಎಡ ಪ್ರಜಾಪ್ರಭುತ್ವ ರಂಗದ ಸರಕಾರದ ಮೇಲೆ, ಮುಖ್ಯವಾಗಿ ಈ ರಂಗದ ಮುಖಂಡತ್ವ ವಹಿಸಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮೇಲೆ ಟೀಕಿಸಿದ್ದಾರೆ. "ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಸರಕಾರ ವಿರೋಧ ಪಕ್ಷಗಳನ್ನು ತುಳಿದು ಮೇಲಕ್ಕೆ ಬಾರದಂತೆ ಮಾಡುತ್ತಿದೆ. ತುರ್ತುಪರಿಸ್ಥಿತಿಯ ಸಂದರ್ಭದಲ್ಲೂ ಕೂಡ ನಾನು ವಿರೋಧ ಪಕ್ಷಗಳನ್ನು ದಮನಮಾಡುವ ಕ್ರಮವಹಿಸಿದ್ದಿಲ್ಲ" ಎಂಬುದಾಗಿ ತ್ರಿಚೂರಿನಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ ಇಂದಿರಾ ಗಾಂಧಿ ಹೇಳಿದ ವರದಿಯಾಗಿದೆ.

ಕೇರಳದ ಮಾರ್ಕ್ಸಿಸ್ಟ್ ಪಕ್ಷದ ನೇತೃತ್ವದ ಸರಕಾರವು ಜನತೆಯಿಂದ ದೂರಸಾಗುತ್ತಿದೆ ಎಂದು ಕಾಂಗ್ರೆ ಮುಖಂಡರುಗಳು ಮಾಡುತ್ತಿದ್ದ ಆಪಾದನೆಯನ್ನು ಇತ್ತೀಚಿನ ಉಪಚುನಾವಣೆಗಳು ಹುಸಿಯಾಗಿಸಿವೆ, ಮಾರ್ಕ್ಸಿಸ್ಟ್ ಪಾರ್ಟಿ ನೇತೃತ್ವದ ಸರಕಾರವನ್ನು ಉರುಳಿಸುವುದಕ್ಕಾಗಿ

ಸಂಪಾದಕೀಯ

ಕಾನೂನು ಪರಿಸ್ಥಿತಿ ಹದಗೆಡಿಸುವಂತೆ ಮಾಡಲು ಕಾಂಗ್ರೆ ಮತ್ತು ಮತೀಯ ಹಾಗೂ ಕೋಮುವಾದಿ ಶಕ್ತಿಗಳು ಒಂದುಸೇರಿ ನಡೆಸುತ್ತಲಿರುವ ಯತ್ನವು ಎಲ್ಲರಿಗೂ ತಿಳಿದಿದೆ. ಕಾಂಗ್ರೆ ಬೆಂಬಲದಿಂದ ಆರ್.ಎಸ್.ಎಸ್. ನಂತಹ ಕೋಮುವಾದಿ ಸಂಘಟನೆಯು ಕಾನೂನನ್ನು ಕೈಗೆತ್ತಿಕೊಂಡು ಹಿಂಸಾಚರಣೆಯಲ್ಲಿ ತೊಡಗಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಲವಾರು ಕಾರ್ಯಕರ್ತರುಗಳು ಆರ್.ಎಸ್.ಎಸ್. ಗೂಂಡಾಗಳ ಧಾಳಿಯಲ್ಲಿ ಸಾವನ್ನಪ್ಪಬೇಕಾಯಿತು. ಇಷ್ಟೆಲ್ಲಾ ನಡೆದಿದ್ದರೂ ಜನತೆಗೆ ಪರಿಹಾರ ನೀಡುತ್ತಾ, ಈ ಛಿದ್ರಕಾರಿ ಶಕ್ತಿಗಳನ್ನು ರಾಜಕೀಯವಾಗಿ ಪ್ರಜಾಪ್ರಭುತ್ವ ರೀತಿಯಲ್ಲಿ ಹೋರಾಡುವುದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಉದ್ದೇಶವಾಗಿದೆ. ಆದುದರಿಂದಲೇ ಎಡ ಪ್ರಜಾಪ್ರಭುತ್ವ ರಂಗದ ಸರಕಾರವು ಜನತೆಯ ವಿಶ್ವಾಸವನ್ನು ಹೆಚ್ಚುಹೆಚ್ಚು ಗಳಿಸುತ್ತಿದೆ. ಇಂದಿರಾ ಗಾಂಧಿ ತಮ್ಮ ಭಾಷಣದಲ್ಲಿ ಹೇಳಿರುವುದನ್ನು ನಂಬುವಷ್ಟು ದಡ್ಡರು ಕೇರಳದ ಜನರಲ್ಲ. ತುರ್ತುಪರಿಸ್ಥಿತಿ ಸಮಯದಲ್ಲಿ ರಾಷ್ಟ್ರದಾದ್ಯಂತ ನಡೆಸಿದ ದಮನಕಾರಿ ಕಾರ್ಯಕ್ರಮಗಳು, ಕೇರಳದಲ್ಲಿ ರಾಜನ್ ಮತ್ತು ಇನ್ನೂ ಹಲವಾರು ಮಂದಿಗೆ ಕೊಟ್ಟ ಹಿಂಸೆ-ಇವೆಲ್ಲಾ ಇಂದಿರಾ ಕಾಂಗ್ರೆಸ್ಸಿನ ರಾಕ್ಷಸೀ ಕೃತ್ಯಕ್ಕೆ ಉದಾಹರಣೆಗಳು.

[ಕಡೇ ಪುಟ ನೋಡಿ]

ವಿಧಾನಸಭಾ ಉಪಚುನಾವಣೆ

"ವಿರೋಧ ಪಕ್ಷಗಳ ಅನೈಕ್ಯತೆ"

ನವೆಂಬರ್ 23 ರಂದು ಬಸವನಗುಡಿ ಮತ್ತು ಹೊಳಲ್ಕೆರೆ ವಿಧಾನಸಭಾ ಕ್ಷೇತ್ರಗಳಲ್ಲಿ ಉಪಚುನಾವಣೆಗಳು ನಡೆಯಲಿವೆ. ಇಂದಿರಾ ಕಾಂಗ್ರೆಸ್‌ನ ವೈಫಲ್ಯಗಳಿಂದಲಾಗಿ ಜನತೆಗೆ ಭ್ರಮನಿರಸನವಾಗುತ್ತಲಿರುವಾಗ ಜನತೆಗೆ ಪರಿಹಾರನೀಡುವ ಬದಲು ಇಂದಿರಾ ಕಾಂಗ್ರೆಸ್ ಸರಕಾರವು ಸರ್ವಾಧಿಕಾರದತ್ತ ಸಾಗುತ್ತಲಿರುವಾಗ ಎಲ್ಲಾ ವಿರೋಧ ಪಕ್ಷಗಳೂ ಒಂದಾಗಿ ಇಂದಿರಾ ಕಾಂಗ್ರೆಸ್ಸಿಗೆ ಪ್ರಬಲ ಹೋರಾಟವನ್ನೀಯುವುದು ಅತ್ಯಗತ್ಯ. ಹಾಗೆ ಹೋರಾಡಿದರೆ ಇಂದಿರಾ ಕಾಂಗ್ರೆಸ್ಸನ್ನು ಸೋಲಿಸುವುದೂ ಸಾಧ್ಯ. ಆದರೆ ಉಪಚುನಾವಣೆಗಳಲ್ಲಿ ಒಮ್ಮತಕ್ಕೆ ಬರಲು ಸಾಧ್ಯವಾಗದೆ ಹಲವು ಅಭ್ಯರ್ಥಿಗಳನ್ನು ನಿಲ್ಲಿಸಿರುವುದನ್ನು ನೋಡಿದಲ್ಲಿ, ರಾಜ್ಯದಲ್ಲಿನ ಮುಖ್ಯ ವಿರೋಧ ಪಕ್ಷಗಳು ಹಿಂದಿನ ಅನುಭವದಿಂದ ಏನೇನೂ ಪಾಠ ಕಲಿತಂತಿಲ್ಲ; ತಮ್ಮ ಸ್ವಂತ ಶಕ್ತಿಯ ಬಗ್ಗೆ ತಪ್ಪು ಕಲ್ಪನೆ, ಅಧಿಕಾರದ ಆಸೆಗಳೇ ಮುಖ್ಯವಾಗಿ ಕಾಣುವಂತಿದೆ, ಇವೆಲ್ಲವುಗಳ ಪ್ರಯೋಜನ ಇಂದಿರಾ ಕಾಂಗ್ರೆಸ್ಸಿಗೆ ಎಂಬುದನ್ನೂ ಮುಖಂಡರುಗಳು ತಿಳಿದಂತಿಲ್ಲ.

ರಾಷ್ಟ್ರಮಟ್ಟದಲ್ಲಿ ನಡೆದ ಆರು ಪಕ್ಷಗಳ ಸಮಾವೇಶದ ನಿರ್ಣಯದ ಆಧಾರದಲ್ಲಿ ರಾಜ್ಯದಲ್ಲೂ ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು ಒಂದುಗೂಡಿಸಬೇಕೆಂಬುದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಆಶೆ, ಈ ದಿಸೆಯಲ್ಲೇ ಪ್ರಯತ್ನವೂ ನಡೆದಿದೆ. ಮಹಾರಾಷ್ಟ್ರ, ಆಂಧ್ರಪ್ರದೇಶಗಳಲ್ಲಿನ ಬೆಳವಣಿಗೆಗಳು ನಮಗೆ ಸ್ಫೂರ್ತಿಯನ್ನೀಯುವಂತಿದೆ, ಕರ್ನಾಟಕದಲ್ಲಿ ಸಿ.ಪಿ.ಐ., ಸಿ.ಪಿ.ಐ.(ಎಂ), ಲೋಕದಳ ಮತ್ತು ಕಾಂಗ್ರೆಸ್(ಯು)ಗಳನ್ನು ಸೇರಿಸಿಕೊಂಡು, ಒಂದು ವಿಶಾಲ ತಳಹದಿಯ ಹೋರಾಟ ರಂಗವನ್ನು ಕಟ್ಟಬೇಕೆಂಬುದು ನಮ್ಮ ಆಶಯ, ಮಹಾರಾಷ್ಟ್ರ, ಆಂಧ್ರಪ್ರದೇಶಗಳಲ್ಲಿ ನಂತೆ ಇಲ್ಲೂ ಜನತಾ ಪಕ್ಷವೂ ಈ ಪ್ರಯತ್ನದಲ್ಲಿ ಪಾಲ್ಗೊಳ್ಳುವಂತಾಗಬೇಕೆಂಬುದು ನಮ್ಮ ಬಯಕೆ. ಕೇವಲ ಚುನಾವಣೆಗಾಗಿ ಮಾತ್ರವಲ್ಲ, ಜನಕೀಯ ಸಮಸ್ಯೆಗಳ ಬಗ್ಗೆ ಜಂಟೀ ಹೋರಾಟ ನಡೆಸಬೇಕೆಂಬುದು ನಮ್ಮ ವಾದ. ಹೋರಾಟಗಳ ಮೂಲಕವೇ ಸಬಲ ಬದಲಿಯನ್ನು ಒದಗಿಸುವುದೂ ಸಾಧ್ಯ.

ಈ ದೃಷ್ಟಿಯನ್ನಿರಿಸಿಕೊಂಡು ರಾಜ್ಯದಲ್ಲಿನ ಉಪಚುನಾವಣೆಗಳಲ್ಲಿ ಸಂಬಂಧಪಟ್ಟ ಪಕ್ಷಗಳೊಳಗೆ ಒಂದು ಹೊಂದಾಣಿಕೆ ಬರುವಂತಾಗಲಿ ಎಂದು ನಾವು

[ಕಡೇ ಪುಟ ನೋಡಿ]

ದೇಶವ್ಯಾಪೀ ಚರ್ಚೆ ಬೇಕು - ಆದರೆ ಯಾವುದರ ಬಗ್ಗೆ?

-ಇ. ಎಂ. ಎಸ್. ನಂಬೂದಿರಿಪಾದ್

ಇತ್ತೀಚೆಗೆ ದೆಹಲಿಯಲ್ಲಿ ಸಮಾವೇಶಗೊಂಡು ಬಹಳಷ್ಟು ಪ್ರಚಾರ ಪಡೆದ ಅಖಿಲ ಭಾರತ ವಕೀಲರ ಸಮ್ಮೇಳನದ ಪ್ರಕಾರ ಒಂದು 'ದೇಶವ್ಯಾಪೀ ಚರ್ಚೆ' ಈ ಎರಡು ಮುಖ್ಯ ವಿಷಯಗಳ ಬಗ್ಗೆ ನಡೆಯಬೇಕಾಗಿದೆ.

1. ವಿರೋಧ ಪಕ್ಷಗಳ ಪಾತ್ರ ಮತ್ತು ಅದಕ್ಕೆ ಸಂಬಂಧಿಸಿದಂತೆ ಇರುವ "ದೇಶವನ್ನು ಆಳಲು ಜನರಿಂದ ಚುನಾಯಿಸಲ್ಪಟ್ಟ ಪಕ್ಷದ ಸಂವಿಧಾನಾತ್ಮಕ ಹಕ್ಕು"

2. "ಜಾತ್ಯಾತೀತ ಪ್ರಜಾಸತ್ತಾತ್ಮಕ ಸಮಾಜವಾದದ ಪ್ರತೀಕ ಹಾಗೂ ದುರ್ಬಲ ವರ್ಗಗಳ ಏಕಮಾತ್ರ ಆಶಾಕಿರಣವಾದ ಶ್ರೀಮತಿ ಗಾಂಧಿ ಮತ್ತು ಅವರ ಕುಟುಂಬದ ಚಾರಿತ್ರ್ಯವಧೆ."

ರಾಜಕೀಯ ವ್ಯವಸ್ಥೆಯನ್ನು ಈಗಿನ ಸಂಸದೀಯ-ಮಂತ್ರಿಮಂಡಲ ಮಾದರಿಯಿಂದ ಅಧ್ಯಕ್ಷೀಯ ಮಾದರಿಗೆ ಬದಲಿಸುವುದರಿಂದ ಜನರ ಸಮಸ್ಯೆಗಳನ್ನು ಪರಿಹರಿಸಬಹುದೆಂಬ ಭಾವನೆಯನ್ನು ಸಮ್ಮೇಳನದಲ್ಲಿ ಅಂಗೀಕರಿಸಬೇಕೆಂದು ವಕೀಲರ ಈ ಸಮ್ಮೇಳನದ ಸಂಘಟಕರು ಬಯಸಿದ್ದರು. ಆದರೆ ಬಹಳಷ್ಟು ಪ್ರತಿನಿಧಿಗಳು ಇದನ್ನು ಖಡಾಖಂಡಿತವಾಗಿ ವಿರೋಧಿಸಿದ್ದರಿಂದ ಈ ಬಗ್ಗೆ ಸಮ್ಮೇಳನದಲ್ಲಿ ನಿರ್ಣಯ ಕೈಗೊಳ್ಳಲಾಗಲಿಲ್ಲ.

ಇಂದಿರಾ ಗಾಂಧಿಯವರ ಪ್ರಕಾರ ತಕ್ಷಣ ಗಮನಹರಿಸಬೇಕಾದ ಇನ್ನೊಂದು ವಿಷಯವೆಂದರೆ "ಕೇವಲ ಮೂಲಭೂತ ಹಕ್ಕುಗಳನ್ನು ಮಾತ್ರ ನೋಡುವವರು ಮತ್ತು ಸಂವಿಧಾನದ ನಿರ್ದೇಶಕ ಸೂತ್ರಗಳ ನಿರೀಕ್ಷೆಯನ್ನು ಈಡೇರಿಸುವ ಕಾನೂನುಗಳಿಗೆ ಆದ್ಯತೆ ನೀಡಬೇಕೆನ್ನುವವರ ನಡುವೆ ದೇಶದಲ್ಲಿ ನಡೆಯುತ್ತಿರುವ ತಾತ್ವಿಕ ಹೋರಾಟ." "ಜನಸಾಮಾನ್ಯರ ದೃಷ್ಟಿಯಲ್ಲಿ ಪ್ರಜಾಪ್ರಭುತ್ವದ ಅರ್ಥ ಆರ್ಥಿಕ ಸಮಸ್ಯೆಗಳನ್ನು ಯಾವ ರೀತಿ ಮತ್ತು ಎಷ್ಟು ಬೇಗನೆ ಪರಿಹರಿಸಬೇಕೆನ್ನುವುದೇ ಆಗಿದೆ" ಎಂದೂ ಅವರು ಹೇಳಿದ್ದಾರೆ, ವಕೀಲರ ಸಮ್ಮೇಳನವನ್ನು ಉದ್ಘಾಟಿಸುತ್ತಾ ಪ್ರಧಾನ ಮಂತ್ರಿಯವರು "ಪ್ರಜಾಪ್ರಭುತ್ವದ ಬಗ್ಗೆ, ಧ್ವನಿ ಎತ್ತಲಿಸಿ ಮಾತನಾಡುವವರು ಯಾವುದೇ ಸಾರ್ವಜನಿಕ ಚರ್ಚೆಗೆ ಹಿಂಜರಿಯುತ್ತಿದ್ದಾರೆ ಎಂಬುದು ಆಶ್ಚರ್ಯದ ಸಂಗತಿ" ಎಂದಿದ್ದಾರೆ.

ಇಲ್ಲಿ ವಿರೋಧ ಪಕ್ಷಗಳವರು ಯಾರೂ ಸಾರ್ವಜನಿಕ ಚರ್ಚೆಗೆ ಹಿಂಜರಿಯುತ್ತಿಲ್ಲ ಎಂಬುದನ್ನು ಸ್ಪಷ್ಟಪಡಿಸಬೇಕಾಗಿದೆ. ಎಡ ಮತ್ತು ಪ್ರಜಾಪ್ರಭುತ್ವವಾದೀ ವಿರೋಧ ಪಕ್ಷಗಳಿಗೆ ಸೇರಿದ ನಮಗಂತೂ ಎಲ್ಲಾ ಮುಖ್ಯ ವಿಷಯಗಳ ಮೇಲೆ ಸಾರ್ವಜನಿಕ ಚರ್ಚೆ ನಡೆಯಬೇಕೆಂಬುದರಲ್ಲಿ ಆಸಕ್ತಿಯಿದೆ. ಆದರೆ ವಿಷಯಗಳನ್ನು ಸಾರ್ವಜನಿಕ ಚರ್ಚೆಗೆ ಒಳಪಡಿಸುವುದು ಹೇಗೆ ? ವಿಷಯಗಳನ್ನು ತಿಳಿಸುವುದು ಹೇಗೆ? ಚರ್ಚೆಗಳನ್ನು ಸಂಘಟಿಸುವುದು ಹೇಗೆ?

ವಕೀಲರ ಸಮ್ಮೇಳನ ಹಾಗೂ ಇಂದಿರಾಗಾಂಧಿಯವರ ಮೇಲೆ ಹೇಳಿದ ಭಾಷಣಗಳನ್ನು ನೋಡಿದರೆ ಚರ್ಚೆಗಳಿಗೆ ವಿಷಯಗಳನ್ನು ಆರಿಸುವುದು ಹಾಗೂ ಅದನ್ನು ಸಂಘಟಿಸುವ ರೀತಿ ಎರಡನ್ನೂ ಆಡಳಿತ ಪಕ್ಷ ಹಾಗೂ ಅದರ ಬೆಂಬಲಿಗರೇ ನಿರ್ಧರಿಸುವಂತೆ ಕಾಣುತ್ತದೆ.

ವಿರೋಧ ಪಕ್ಷಗಳಾಗಲೀ, ಸಾಮಾಜಿಕ, ಆರ್ಥಿಕ ಹಾಗೂ ಸಾಮೂಹಿಕ ಸಂಘಟನೆಗಳಿಗೆ ಇದರಲ್ಲಿ ಯಾವ ಪಾತ್ರವೂ ಇದ್ದಂತೆ ಕಾಣುವುದಿಲ್ಲ.

ಇವರೆಲ್ಲರೊಂದಿಗೆ ಪರಾಮರ್ಶಿಸಿ ಸಾರ್ವಜನಿಕ ಚರ್ಚೆಗೆ ವಿಷಯ ಆರಿಸಿದರೆ ದೇಶದ ಆರ್ಥಿಕ ಪರಿಸ್ಥಿತಿಯೇ ಇವರೆಲ್ಲರ ಮೊದಲ ಆಯ್ಕೆಯಾಗುತ್ತದೆ.

ಮೂರು ದಶಕಗಳ ಯೋಜನೆಯ ನಂತರವೂ ಬಹುಸಂಖ್ಯಾತ ಜನರ ಜೀವನಮಟ್ಟ ಸುಧಾರಿಸುವ ಬದಲು ಹದಗೆಟ್ಟಿದೆಯೇಕೆ ? ನಿರುದ್ಯೋಗ ಏಕೆ ಹೆಚ್ಚುತ್ತಿದೆ? ಅಗತ್ಯ ವಸ್ತುಗಳ ಬೆಲೆ ಹೆಚ್ಚುತ್ತಿದೆ; ಆದರೆ ಸಣ್ಣ ಹಾಗೂ ಮಧ್ಯಮ ವರ್ಗದ ಉತ್ಪಾದಕರ ವಸ್ತುಗಳ ಬೆಲೆ ಇಳಿದಿದೆಯೇಕೆ? ಜನಸಾಮಾನ್ಯರ ಮೇಲಿನ ಸಾಲ ಹಾಗೂ ಕರದ ಹೊರೆ ಏಕೆ ಏರಿದೆ? ಐದು ಪಂಚವಾರ್ಷಿಕ ಯೋಜನೆಗಳು ಮುಗಿದ ನಂತರವೂ ದೇಶ ಮೂರನೇ ಜಗತ್ತಿನ ದೇಶಗಳೊಂದಿಗೆ ಹೋಲಿಸಿದರೂ ಬಹಳ ಹಿಂದುಳಿದಿದೆ ಏಕೆ?

ಇವೆಲ್ಲದರ ಮೇಲೆ ಒಂದು ಸಾರ್ವಜನಿಕ ಚರ್ಚೆ ನಡೆಯಬೇಕಾಗಿದೆ ಆಡಳಿತ ಪಕ್ಷ, ವಿರೋಧ ಪಕ್ಷ, ಬೇರೆ ಬೇರೆ ಕ್ಷೇತ್ರದ ಪರಿಣತರು, ಕಾರ್ಮಿಕ ಸಂಘಟನೆ ಮುಂತಾದ ಸಾಮೂಹಿಕ ಸಂಘಟನೆಗಳಿಗೆ ಸೇರಿದವರ ನಡುವೆ

[ಕಡೇ ಪುಟ ನೋಡಿ]

ಸಂಕ್ಷಿಪ್ತ ಸಮಾಚಾರಗಳು

ಕೋಲಾರ :

ಸ್ಥಳೀಯ ಪ್ರೊಬೇಶನರಿ ಸಬ್‌ಇನ್ಸ್‌ಪೆಕ್ಟರ್ ದಿನೇಶ್‌ರಾವ್ ಎಂಬುವರು ಆಟೋಚಾಲಕರನ್ನು ಥಳಿಸಿದ ಕಾರಣ ದಿನಾಂಕ 11-10-80ರಂದು ನಗರದ ಆಟೋಚಾಲಕರು ಮಿಂಚಿನ ಮುಷ್ಕರ ಹೂಡಿದರು. ಪುರಸಭಾ ಭವನದ ಮುಂದೆ ಕಾಂ. ಆರ್. ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಬೃಹತ್ ಸಭೆಯಲ್ಲಿ ಪೋಲೀಸರ ಅಮಾನುಷ ಕೃತ್ಯವನ್ನು ಉಗ್ರವಾಗಿ ಖಂಡಿಸಲಾಯಿತು. ಸಭೆಯ ನಂತರ ಮೆರವಣಿಗೆಯಲ್ಲಿ ಆಟೋಚಾಲಕರು ಹೊರಟು ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್ ರವರಿಗೆ ಮನವಿ ಅರ್ಪಿಸಲಾಯಿತು.

ದೊಡ್ಡಬಳ್ಳಾಪುರ :

ದಿ. 20-10-80ರಂದು ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರದಲ್ಲಿ ಡಿ ವೈ ಓ. ಸಭೆ ನಡೆಯಿತು. ಸಭೆಯನ್ನು ಉದ್ದೇಶಿಸಿ ಕಾಂ. ಜಿ. ವಿ. ಶ್ರೀರಾಮರೆಡ್ಡಿಯವರು "ನಿರುದ್ಯೋಗ ಸಮಸ್ಯೆ ಹಾಗೂ ಯುವಜನ ಸಂಘಟನೆಯ ಅವಶ್ಯಕತೆ" ಎಂಬ ವಿಷಯದ ಬಗ್ಗೆ ಮಾತನಾಡಿದರು. ಕಾಂ. ಎ. ವಿ. ಜಯಶೇಖರ್‌ರವರು ಸ್ಟೈಫಂಡರಿ ಪದವೀಧರರ ಹೋರಾಟದ ಬಗ್ಗೆ ತಿಳಿಸಿದರು.

ಹಿರೆ ಬಂಡಾಡಿ :

ಪುತ್ತೂರು ತಾಲ್ಲೂಕಿನ ಹಿರೇಬಂಡಾಡಿ ಗ್ರಾಮದಲ್ಲಿ ದಿ.23-10-80 ರಂದು ರೈತಕೃಷಿ ಕಾರ್ಮಿಕರ ಸಂಘವನ್ನು ಪುತ್ತೂರು ತಾಲ್ಲೂಕು ರೈತ ಸಂಘದ ಉಪಾಧ್ಯಕ್ಷ ಕಾಂ. ಬಿ. ರಾಮಕೃಷ್ಣ ಉದ್ಘಾಟಿಸಿದರು. ಆರಂಭದಲ್ಲಿ ಕಾಂ. ವಿಲ್‌ಫ್ರೆಡ್ ಸ್ವಾಗತಿಸಿದರು. ಕಾಂ. ರಾಮಕೃಷ್ಣನವರು ಮಾತನಾಡುತ್ತಾ ಹಳ್ಳಿಯ ರೈತರು, ಕೃಷಿಕೂಲಿಗಾರರು ಸಂಘಟಿತರಾಗಬೇಕಾದ ಆವಶ್ಯಕತೆಯನ್ನು ತಿಳಿಸಿದರು. ಕೊನೆಗೆ ಕಾಂ. ಲಿಂಗಪ್ಪ ಕಾರ್ಯದರ್ಶಿಯಾಗಿರುವ ಗ್ರಾಮಸಮಿತಿಯೊಂದನ್ನು ರಚಿಸಲಾಯಿತು.

ಮೊಸರ ಕಲ್ಲು :

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮೊಸರಕಲ್ಲು ಗ್ರಾಮದಲ್ಲಿ ದಿನಾಂಕ 25-10-80 ರಂದು ರೈತಕಾರ್ಮಿಕರ ಬಹಿರಂಗ ಸಭೆ ನಡೆಯಿತು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಕಾಂ. ಚಂದ್ರಶೇಖರ ಬಾಳೆಯವರು ಮಾತನಾಡುತ್ತಾ ಜಿಲ್ಲೆಯಾದ್ಯಂತ ಮಳೆ ಇಲ್ಲದೇ ಬವಣೆಗೀಡಾಗಿರುವ ರೈತಕಾರ್ಮಿಕರ ಪರಿಸ್ಥಿತಿಯನ್ನು ವಿವರಿಸಿ ರಾಜ್ಯದಾದ್ಯಂತ ನಡೆಯುತ್ತಿರುವ ರೈತಚಳುವಳಿಯಲ್ಲಿ ಪಾಲ್ಗೊಳ್ಳಲು ಕರೆನೀಡಿದರು.

ಮಂಗಳೂರ :

ದಿನಾಂಕ 27-10-80 ರಂದು ಮಂಗಳೂರಿನಲ್ಲಿ "ಮೋಟಾರ್ ಟ್ರಾನ್ಸ್‌ಪೋರ್ಟ್ ಮತ್ತು ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್"ನ ಕಾರ್ಯಕಾರಿ ಸಮಿತಿಯ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಪಿ. ರಾಮಚಂದ್ರರಾಯರು ವಹಿಸಿದ್ದರು. ಸಂಘಟನೆಯ ಬಗ್ಗೆ ಚರ್ಚಿಸಿ, ಬಲಪಡಿಸಲು ಕಾರ್ಯಕ್ರಮ ಹಾಕಲಾಯಿತು. ಕಾಂ. ಕೆ. ಮೂಸಬ್ಬರವರನ್ನು ಯೂನಿಯನ್‌ನ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು. ಸಭೆಗೆ ಆಗಮಿಸಿದ್ದ ಕರ್ನಾಟಕ ಪ್ರಾಂತ ಸಿ. ಐ. ಟಿ. ಯು. ಪ್ರಧಾನ ಕಾರ್ಯದರ್ಶಿ ಕಾಂ. ನಂಜುಂಡಪ್ಪನವರು ದಿನಾಂಕ 23 ಮತ್ತು 24 ರಂದು ಉಡುಪಿಯಲ್ಲಿ ಜರುಗಿದ ಸಿ. ಐ. ಟಿ. ಯು. ಕೌನ್ಸಿಲ್ ನಿರ್ಣಯವನ್ನು ವಿವರಿಸಿದರು.

ಅಮರ ಮುಡ್ನೂರ :

ಸುಳ್ಯ ತಾಲ್ಲೂಕಿನ ಅಮರ ಮುಡ್ನೂರ ಗ್ರಾಮದ ಹಿರಿಯಡ್ಕ ಎಂಬಲ್ಲಿ ದಿನಾಂಕ 28-10-80 ರಂದು ರೈತಸಂಘದ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸ್ಥಳೀಯ ಸಿ.ಪಿ.ಐ. (ಎಂ) ಮುಂದಾಳು ಹರಿಯಪ್ಪಗೌಡರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸುಳ್ಯ ತಾಲ್ಲೂಕು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಂ. ಮೋನಪ್ಪಗೌಡರು ಆಗಮಿಸಿ ರೈತ ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ವಿವರಿಸಿದರು.

ಚಿಕ್ಕ ಬಳ್ಳಾಪುರ :

ಕೋಲಾರ ಜಿಲ್ಲಾ ವಿರೋಧಪಕ್ಷಗಳ ಕ್ರಿಯಾಸಮಿತಿಯ ಕರೆಯ ಮೇರೆಗೆ ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರದಲ್ಲಿ ದಿನಾಂಕ 29-10-80 ರಂದು ರೈತರ ಪ್ರದರ್ಶನ, ಪಿಕೆಟಿಂಗ್ ಕಾರ್ಯಕ್ರಮ ನಡೆಯಿತು. ಅಸಿಸ್ಟೆಂಟ್ ಕಮೀಷನರ ಆಫೀಸಿನೆದುರು ಪಿಕೆಟಿಂಗ್ ನಡೆಸಿದ 11 ಜನಕಾರ್ಯಕರ್ತರನ್ನು ಬಂಧಿಸಲಾಯಿತು. ಇವರಲ್ಲಿ 6 ಜನ ಮಹಿಳೆಯರಿದ್ದರು. ಈ ಕಾರ್ಯಕ್ರಮ 30-10-80 ಮತ್ತು 31-10-80 ರಂದೂ ಮುಂದುವರಿಯಿತು. ಈ ಹೋರಾಟದಲ್ಲಿ ನೂರಾರು ರೈತರು ಭಾಗವಹಿಸಿದ್ದರು. 31-10-80ರಂದು ನಡೆದ ಬಂಧನ ಸತ್ರದಲ್ಲಿ ಕಾಂ. ಲಕ್ಷ್ಮಯ್ಯ, ರಾಮಯ್ಯ, ಕಾಂತರಾಜ್, ಶಿವಣ್ಣ, ನಾರಾಯಣಸ್ವಾಮಿ ಮತ್ತು ಕಾಂ. ಮುದ್ದಪ್ಪ ಸೇರಿದ್ದರು. ಈ ಕಾರ್ಯಕ್ರಮಗಳ ನೇತೃತ್ವವನ್ನು ಕಾಂ. ಲಕ್ಷ್ಮಯ್ಯ ವಹಿಸಿದ್ದರು.

ಪುತ್ತೂರ :

ದಿನಾಂಕ 1-11-80 ರಂದು ದ. ಕ. ಜಿಲ್ಲೆಯ ಪುತ್ತೂರಿನಲ್ಲಿ ಹಮಾಲಿ (ತಲೆ ಹೊರುವ ಕಾರ್ಮಿಕ) ಸಂಘವನ್ನು ದ. ಕ. ಜಿಲ್ಲಾ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಂ ಕೆ ಆರ್. ಶ್ರೀಯಾನ್ ಉದ್ಘಾಟಿಸಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ. ಬಿ. ರಾಮಕೃಷ್ಣ ವಹಿಸಿದ್ದರು. ಸಭೆಯ ಕೊನೆಗೆ ಕಾಂ. ಸುಬ್ಬಣ್ಣನವರ ನೇತೃತ್ವದಲ್ಲಿ ಸಂಘಟನಾ ಸಮಿತಿಯೊಂದನ್ನು ರಚಿಸಲಾಯಿತು.

ತಿಪಟೂರ :

ದಿನಾಂಕ 3-11-80 ರಂದು ತಿಪಟೂರ ತಾಲ್ಲೂಕು ರೈತ ಸಂಘದ ಸಭೆಯು ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಎಂ. ಆರ್. ತೋಪೇಗೌಡರು ವಹಿಸಿದ್ದರು. ಕಳೆದ ತಿಂಗಳು ತಾಲ್ಲೂಕಿನ ರೈತರು ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ತಹಸೀಲ್ದಾರರ ಮೂಲಕ ಮನವಿ ಅರ್ಪಿಸಿದ್ದರು. ಆದರೆ ಈ ಬಗ್ಗೆ ಯಾವದೇ ಕ್ರಮ ಜರುಗಿಲ್ಲವಾದ್ದರಿಂದ ಚಳುವಳಿಯನ್ನು ರೂಪಿಸಬೇಕೆಂದು ತೀರ್ಮಾನಿಸಲಾಯಿತು.

ಉಡುಪಿ :

ದಿನಾಂಕ 4-11-80 ರಂದು ಉಡುಪಿಯ ಸಂಯುಕ್ತ ಕಾರ್ಮಿಕ ಕ್ರಿಯಾ ವೇದಿಕೆಯ ಸಭೆಯು ವೇದಿಕೆಯ ಸಂಚಾಲಕರಾದ ಶ್ರೀ ಪಿ. ವಿಶ್ವನಾಥರೈಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಇತ್ತೀಚೆಗೆ ಹೊರಡಿಸಿರುವ ರಾಷ್ಟ್ರೀಯ ಭದ್ರತಾ ಕಾಯ್ದೆಯನ್ನು ಖಂಡಿಸಿ, ತಕ್ಷಣವೇ ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಲಾಯಿತು. ಕಳೆದ ಒಂದುವರೆ ತಿಂಗಳಿಂದ ಮುಷ್ಕರದಲ್ಲಿರುವ ಮಂಗಳೂರ ಆಟೋ ಚಾಲಕರಿಗೆ ಬೆಂಬಲ ವ್ಯಕ್ತಪಡಿಸಲಾಯಿತು. ಅಲ್ಲದೇ ಬಾಡಿಗೆದಾರರ ಸಮಸ್ಯೆಗಳನ್ನು ಚರ್ಚಿಸಿ ಅವುಗಳ ಪರಿಹಾರಕ್ಕೆ ಕಾರ್ಯಕ್ರಮಗಳನ್ನು ರೂಪಿಸುವುದಕ್ಕಾಗಿ ಬಾಡಿಗೆದಾರರ ಸಮಾವೇಶವನ್ನು ಉಡುಪಿಯಲ್ಲಿ ತಾ. 4-12-80 ರಂದು ಏರ್ಪಡಿಸಲು ನಿರ್ಧರಿಸಲಾಯಿತು.

ಮಂಗಳೂರ :

ದಿನಾಂಕ 5-11-80 ರಂದು ಮಂಗಳೂರಿನಲ್ಲಿ ದ. ಕ. ಜಿಲ್ಲಾ ಆಟೋ ಚಾಲಕರ ಸಂಘದ ಕಾರ್ಯಕಾರಿ ಸಮಿತಿ ಮತ್ತು ಕ್ರಿಯಾಸಮಿತಿಯ ಜಂಟೀ ಸಭೆಯು ಸಂಘದ ಉಪಾಧ್ಯಕ್ಷರಾದ ಕೆ. ಅಬ್ಬುಬಕರ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. 36 ದಿನಗಳ ಕಾಲ ಶಾಂತ ರೀತಿಯಿಂದ ಸರದಿ ಅನ್ನ ಸತ್ಯಾಗ್ರಹದಲ್ಲಿ ಪಾಲ್ಗೊಂಡ ಸತ್ಯಾಗ್ರಹಿಗಳನ್ನು ಹಾಗೂ ಬೆಂಬಲ ಕೊಟ್ಟ ಸಂಘಸಂಸ್ಥೆಗಳನ್ನು ಅಭಿನಂದಿಸಲಾಯಿತು.

ವಿಜಾಪುರ :

29-10-80 ರಿಂದ ಕಾರ್ಮಿಕರ ಬೇಡಿಕೆಗಳ ಈಡೇರಿಕೆಗಾಗಿ ವಿಜಾಪುರದ ಮುನಿಸಿಪಲ್ ಕಾಮಗಾರ ಯುನಿಯನ್‌ನ ಸೆಕ್ರೆಟರಿ ಕಾಮ್ರೇಡ್ ಸೊನ್ನದ್‌ರವರು ನಗರಸಭೆಯ ಎದುರು ಅನ್ನಸತ್ಯಾಗ್ರಹ ಕೈಗೊಂಡಿದ್ದರು. ಕಾಂ. ಎನ್.ಕೆ. ಉಪಾಧ್ಯಾಯ ಮತ್ತು ಕಾಂ. ಬಿ. ಎಚ್. ಕಲಾದಗಿಯವರು ಈ ಬಗ್ಗೆ ಮುನಿಸಿಪಲ್ ಕಮೀಷನರನ್ನು ಭೇಟಿಯಾಗಿ ನೌಕರರಿಗಾದ ಅನ್ಯಾಯವನ್ನ ಪ್ರತಿಭಟಿಸಿದರು. ಕಮೀಷನರರು ಬೇಡಿಕೆಗಳನ್ನು ಈಡೇರಿಸುವ ಲಿಖಿತ ಆಶ್ವಾಸನೆ ಕೊಟ್ಟ ನಂತರ ದಿನಾಂಕ 31-10-80 ರಂದು ಕಾಂ. ಸೊನ್ನದ ಅವರ ಅನ್ನಸತ್ಯಾಗ್ರಹ ಯಶಸ್ವಿಯಾಗಿ ಕೊನೆಗೊಂಡಿತು.

ಮೈಸೂರ :

ದಿನಾಂಕ 29-10-80 ರಂದು ಮಹದೇಶ್ವರ ಬೆಟ್ಟದಲ್ಲಿ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನದ ನೌಕರರ ಸಂಘದ ಸಭೆಯು ಸಂಘದ ಅಧ್ಯಕ್ಷ ಕಾಂ. ಎಂ. ಎನ್. ಉಗ್ರಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ದೇವಸ್ಥಾನದ ಸೇವೆಯಲ್ಲಿ ಅನೇಕ ವರ್ಷಗಳಿಂದ ಕೆಲಸ ಮಾಡುತ್ತಿದ್ದು ಕಡಿಮೆ ಸಂಬಳ ಪಡೆಯುತ್ತಿದ್ದವರನ್ನು ವಯಸ್ಸಾದವರೆಂಬ ಕಾರಣದಿಂದ ಪರಿಹಾರ ಕೊಡದೇ ವಜಾಮಾಡುತ್ತಿರುವದನ್ನು ಖಂಡಿಸಲಾಯಿತು. ಅಲ್ಲದೆ ಪ್ರಾವಿಡೆಂಟ್ ಫಂಡ್ ಇನ್ಸ್‌ಪೆಕ್ಟರರು ಕೇಳಿದ ಮಾಹಿತಿಯನ್ನು ಕೊಡದ ಆಡಳಿತ ಮಂಡಳಿಯ ಔದಾಸೀನ್ಯವನ್ನು ಖಂಡಿಸಿ ಮಾಹಿತಿ ಒದಗಿಸುವಂತೆ ಒತ್ತಾಯಿಸಲಾಯಿತು.

●

ಚೆಟ್ಟಳ್ಳಿಯಲ್ಲಿ ಭಾರಿ ಮೆರವಣಿಗೆ, ಸಭೆ

ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಹತ್ತು ತಿಂಗಳುಗಳಾದರೂ, ಚುನಾವಣಾ ಸಮಯದಲ್ಲಿ ಜನತೆಗೆ ಕೊಟ್ಟ ಆಶ್ವಾಸನೆಗಳನ್ನು ಈಡೇರಿಸುವುದರಲ್ಲಿ ಇಂದಿರಾ ಸರಕಾರವು ಸಂಪೂರ್ಣ ವಿಫಲಗೊಂಡಿದೆ. ಭದ್ರ ಸರಕಾರದ ಭರವಸೆ ನೀಡಿದ್ದ ಕಾಂಗ್ರೆಸ್ಸಿನ ಸರಕಾರಗಳಿರುವಲ್ಲೆಲ್ಲಾ, ಒಳಜಗಳ ಮತ್ತು ಗುಂಪುಗಾರಿಕೆಗಳಿಂದಲಾಗಿ ಸರಕಾರವೇ ಇಲ್ಲದಂತಿದೆ. ಜನತೆಗೆ ಪರಿಹಾರವೀಯುವುದಕ್ಕೆ ಬದಲು, ಜನತೆಯ ಪ್ರಜಾಪ್ರಭುತ್ವ ಹಕ್ಕುಗಳನ್ನೇ ಕಸಿಯಲಾಗುತ್ತಿದೆ. ಸರ್ವಾಧಿಕಾರವು ತಲೆಎತ್ತುತ್ತಿದೆ. ಕೇರಳ, ಪಶ್ಚಿಮ ಬಂಗಾಳ, ಮತ್ತು ತ್ರಿಪುರಾಗಳ ಅನುಭವಪಡೆದು, ಅಲ್ಲಿಂದ ಸ್ಫೂರ್ತಿಪಡೆದು ರಾಷ್ಟ್ರದಾದ್ಯಂತ ಎಡಪ್ರಜಾಪ್ರಭುತ್ವ ಬದಲಿ ಬೆಳೆಸುವುದೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಉದ್ದೇಶ. ಜನತೆಯ ಸಮಸ್ಯೆಗಳ ಪರಿಹಾರಕ್ಕೂ, ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗೂ ಜಂಟೀ ಹೋರಾಟ ನಡೆಸಲು ಮುಂದಾಗಬೇಕೆಂದು ಕೊಡಗು ಜಿಲ್ಲೆಯ ಚೆಟ್ಟಳ್ಳಿಯಲ್ಲಿ ನವೆಂಬರ್ 2ರಂದು ಸಂಜೆ ಸೇರಿದ್ದ ಭಾರಿ ಬಹಿರಂಗಸಭೆಯನ್ನುದ್ದೇಶಿಸಿ ಹೇಳಿದರು ಸಿ. ಪಿ. ಐ. (ಎಂ) ರಾಜ್ಯಸಮಿತಿ ಕಾರ್ಯದರ್ಶಿ ಕಾಂ. ಎಂ ಕೆ. ಭಟ್. ಜನತೆಗೆ ಪೊಳ್ಳು ಭರವಸೆಗಳನ್ನಿತ್ತು ಗೆದ್ದುಬಂದ ಶಾಸಕರು ಈಗೆಲ್ಲಿರುವರು ಎಂದು ಹೀಯಾಳಿಸಿದ ಎಂ. ಕೆ. ಯವರು, ಜನತೆಗೆ ಬೇಕಾಗಿ ಸದಾ ಶ್ರಮಿಸುವ ತಮ್ಮ ಪಕ್ಷಕ್ಕೆ ಬೆಂಬಲವೀಯಲು ಕರೆ ಇತ್ತರು.

ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಕಾರ್ಮಿಕ ಮುಂದಾಳುಗಳಾದ ಕಾಂ. ಡಾ. ಅಪ್ಪಣ್ಣ, ಕಾಂ. ಕುಟ್ಟಪ್ಪನ್, ಕಾಂ. ದಿವಾಕರನ್, ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಗಣೇಶ, ಜಿಲ್ಲಾ ಪಕ್ಷದ ಸಮನ್ವಯ ಸಮಿತಿ ಕಾರ್ಯದರ್ಶಿ ಕಾಂ. ಲತೀಫ್, ಸಿದ್ದಾಪುರದ ಕಾಂ. ರವಿ ಮೊದಲಾದವರು ಸರಕಾರದ ಕಾರ್ಮಿಕ ವಿರೋಧಿ ಧೋರಣೆಗಳನ್ನು ಖಂಡಿಸಿ, ಸಂಘಟಿತ ಹೋರಾಟವನ್ನು ಬಲಪಡಿಸಲು ಕರೆ ಇತ್ತರು. ಚೆಟ್ಟಳ್ಳಿ ಪಕ್ಷದ ಶಾಖೆಯ ಕಾರ್ಯದರ್ಶಿ ಕಾಂ. ವೀರಾಸ್ವಾಮಿಯವರು ಬಹಿರಂಗ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಸಭೆಗೆ ಮೊದಲು ನೂರಾರು ಮಂದಿ ಮಹಿಳೆಯರೂ ಸೇರಿದಂತೆ, ಒಂದು ಸಾವಿರಕ್ಕಿಂತಲೂ ಹೆಚ್ಚು ಜನರಿಂದ ಚೆಟ್ಟಳ್ಳಿಯಲ್ಲಿ ಭಾರೀ ಮೆರವಣಿಗೆ ನಡೆಯಿತು. ಸುತ್ತುಮುತ್ತಲಿನ ತೋಟಗಳಿಂದ ಬಂದಿದ್ದ ಕಾರ್ಮಿಕರಿಂದ ಸೇರಿದ್ದ ಈ ಭಾರಿ ಮೆರವಣಿಗೆಯು ಹಿಂದೆಂದೂ ಚೆಟ್ಟಳ್ಳಿಯಲ್ಲಿ ನಡೆದಿರದಷ್ಟು ದೊಡ್ಡದಾಗಿತ್ತು. ಸಭೆಗೆ ಮೊದಲು ಕ್ರಾಂತಿಕಾರಿ ಹಾಡುಗಳನ್ನು ಹಾಡಲಾಯಿತು.

●

ಅಖಿಲ ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ (ಡಿ. ವೈ. ಎಫ್. ಐ.)ನ ಪ್ರಥಮ ಸಮ್ಮೇಳನ

ಕೋಮುವಾದ, ಪ್ರಾಂತೀಯವಾದ, ಸಾಮ್ರಾಜ್ಯಶಾಹಿ ಪಿತೂರಿ, ಗುತ್ತೇದಾರಿ ಬಂಡವಳಶಾಹಿ, ಭೂಮಾಲಕ ಶಕ್ತಿಗಳ ನಗ್ನ ಶೋಷಣೆ, ಆರ್ಥಿಕ ಮತ್ತು ಸಾಮಾಜಿಕವಾಗಿ ಜರ್ಜರಿತವಾಗಿರುವ, ಪಟ್ಟಭದ್ರರ ಕಪಿಮುಷ್ಟಿಯಲ್ಲಿರುವ ದೇಶವನ್ನು ವಿಮುಕ್ತಗೊಳಿಸಲು, ಜನತೆಯು ಶಾಂತಿಯುತ ಸಹಬಾಳ್ವೆಯಿಂದ ಬದುಕಲು ಅನುವು ಮಾಡಿಕೊಡುವ ಪ್ರಗತಿಪರ, ಪ್ರಜಾಸತ್ತಾತ್ಮಕ ಹೋರಾಟಗಳಲ್ಲಿ ಸಹಭಾಗಿತ್ವ ಪಡೆದು ಹೋರಾಟಕ್ಕಿಳಿಯಲು ಯುವಜನರು ಡಿ.ವೈ. ಎಫ್. ಐ.ನ ಅಖಿಲ ಭಾರತ ಮಟ್ಟದಲ್ಲಿ ನಡೆದ ಪ್ರಥಮ ಸಮ್ಮೇಳನದಲ್ಲಿ ಪ್ರತಿಜ್ಞೆ ಕೈಗೊಂಡರು.

ನವೆಂಬರ್ 1ರಿಂದ3ರವರೆಗೆ ಪಂಜಾಬಿನ ಲುಧಿಯಾನಾದಲ್ಲಿ ನಡೆದ ಪ್ರಥಮ ಸಮ್ಮೇಳನದಲ್ಲಿ ದೇಶದ 18 ರಾಜ್ಯಗಳ 13ಲಕ್ಷಕ್ಕೂಮಿಕ್ಕಿ ಸದಸ್ಯತ್ವ ಪಡೆದಿರುವ 552 ಪ್ರತಿನಿಧಿಗಳು ಭಾಗವಹಿಸಿದ್ದರು. ಕರ್ನಾಟಕದಿಂದ ಈ ಸಮ್ಮೇಳನದಲ್ಲಿ ಭಾಗವಹಿಸಿದ 5ಜನ ಪ್ರತಿನಿಧಿಗಳಲ್ಲಿ ಬೆಂಗಳೂರ ಜಿಲ್ಲೆ ಪರವಾಗಿ ನಾನು ಭಾಗವಹಿಸಿದ್ದೆ.

28-10-80ರಿಂದಲೇ ನವದೆಹಲಿಯನ್ನು ಕೇಂದ್ರವನ್ನಾಗಿಸಿಕೊಂಡು ಸಮ್ಮೇಳನದಲ್ಲಿ ಭಾಗವಹಿಸಲು ದಕ್ಷಿಣ ಭಾರತದ ಪ್ರತಿನಿಧಿಗಳು ತಂಡ ತಂಡವಾಗಿ ಬಂದಿಳಿಯುತ್ತಿದ್ದರು. 29-10-80ರಿಂದ 30ರವರೆಗೆ ದೆಹಲಿಯಲ್ಲಿ ಸಮ್ಮೇಳನದ ಪೂರ್ವ ಸಿದ್ಧತಾ ಸಮಿತಿಯ ಸಭೆ ನಡೆಯುತಿತ್ತು. 31ರ ರಾತ್ರಿ ದೆಹಲಿಯನ್ನು ಬಿಟ್ಟು ರೈಲಿನಲ್ಲಿ ಲುಧಿಯಾನ ತಲುಪುವ ಏರ್ಪಾಡು ಮೊದಲೇ ಆಗಿದ್ದರಿಂದ ಪ್ರತಿನಿಧಿಗಳು ದೆಹಲಿಯನ್ನು ಸುತ್ತಾಡಲು ಸಮಯವಿದ್ದುದರಿಂದ ನಾವು ಕೆಲವು ಸ್ಥಳಗಳನ್ನು ಸಂದರ್ಶಿಸಿದೆವು. ಲುಧಿಯಾನಾಕ್ಕೆ ಹೊರಡಲು ರೈಲಿನ ಒಂದು ಬೋಗಿಯನ್ನು ಕಾದಿರಿಸಿದ್ದರಿಂದ ಪ್ರಯಾಣ ಕಷ್ಟಕರವಾಗಿರಲಿಲ್ಲ. ಬೋಗಿಯ ಹೊರಮೈ ಮೇಲೆ "ಮಾರ್ಚ್ ಟು ಲುಧಿಯಾನಾ"(ಲೂಧಿಯಾನಾಕ್ಕೆ ಮುನ್ನಡೆಯಿರಿ) ಎಂಬ ಬರಹಗಳನ್ನೊಳಗೊಂಡ ಪೋಸ್ಟರುಗಳನ್ನು ಲಗತ್ತಿಸಲಾಗಿತ್ತು. ದಕ್ಷಿಣ ಭಾರತದ ಹೆಚ್ಚಿನಂಶ ಪ್ರತಿನಿಧಿಗಳು, ಉತ್ತರಭಾರತದ ಹಾಗೂ ದೆಹಲಿಯ ಸಾಂಸ್ಕೃತಿಕ ತಂಡದ ಕೆಲವರೂ ಬೋಗಿಯಲ್ಲಿ ತುಂಬಿಕೊಂಡಿದ್ದರು.

ದಟ್ಟ ಹೊಗೆಯಂತೆ ಬೀಳುತ್ತಿದ್ದ ಹಿಮವನ್ನು ಸೀಳುತ್ತಾ ನಮ್ಮ ಟ್ರೈನು ಲುಧಿಯಾನದೆಡೆ ಭರದಿಂದ ಸಾಗುತ್ತಿತ್ತು. ರೈಲಿನ ಎಲ್ಲ ಪ್ರಯಾಣಿಕರು ನಿದ್ರೆಯ ಮಂಪರಿನಲ್ಲಿದ್ದರೆ ನಮ್ಮ ಬೋಗಿಯಲ್ಲಿದ್ದ ಸಂಗಾತಿಗಳು ಹಷದ ಹೊನಲಿನಲ್ಲಿದ್ದರು. ವಿವಿಧ ಭಾಷೆಗಳಲ್ಲಿ ರಚಿತವಾಗಿದ್ದ ಕ್ರಾಂತಿಗೀತೆಯ ಅಲೆಗಳು ನಮ್ಮ ಬೋಗಿಯಿಂದ ಅಲೆಅಲೆಯಾಗಿ ಹೊರಬೀಳುತ್ತಿದ್ದವು.

ನವೆಂಬರ್ 1ರ ಬೆಳಗಿನ ಜಾವ ನಮ್ಮ ಟ್ರೈನು ಲೂಧಿಯಾನಾ ತಲುಪಿತು. ಮಂಜು ನಿಧಾನವಾಗಿ ಕರಗುತ್ತಿತ್ತು. ಮಾರ್ಗದರ್ಶನ ನೀಡಲು ಸ್ವಯಂ ಸೇವಕರಿದ್ದರೂ ಅಗತ್ಯವಿರಲಿಲ್ಲ. ಏಕೆಂದರೆ ರೈಲುನಿಲ್ದಾಣದಿಂದ ಸ್ವಾಗತಸಮಿತಿಯವರೆಗೂ ಅಸಂಖ್ಯಾತ ಕೆಂಪು ನಕ್ಷತ್ರಗಳನ್ನೊಳಗೊಂಡ ಬಾವುಟಗಳು ನಮಗೆ ದಾರಿತೋರಿಸುತ್ತಿದ್ದವು. 17ರ ಹರೆಯದ ಸ್ವಯಂ ಸೇವಕನೊಬ್ಬ ಜಿಂಕೆಯಂತೆ ಜಿಗಿದಾಡುತ್ತ ಉತ್ಸಾಹದಿಂದ ಬಂದಿಳಿಯುತ್ತಿದ್ದ ಪ್ರತಿನಿಧಿಗಳಿಗೆ ಸ್ವಾಗತಿಸುತ್ತಿದ್ದ.

ಪಂಜಾಬ್ ಅನೇಕ ಕ್ರಾಂತಿಕಾರಿಗಳಿಗೆ ಜನ್ಮಕೊಟ್ಟನಾಡು. ಬ್ರಿಟಿಷ್ ಆಳ್ವಿಕೆಯನ್ನು ವಿಚಲಿತಗೊಳಿಸಿದ್ದ ಗದರ್ ವಿಪ್ಲವ್‌ದ ಸಂಗಾತಿಗಳ, ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರಾಟ್ ಶಕ್ತಿಯ ಎದುರು ಹೋರಾಟಕ್ಕಿಳಿದು ಎಳೆಯ ವಯಸ್ಸಿನಲ್ಲಿ ಹುತಾತ್ಮನಾದ ಭಗತ್‌ಸಿಂಗ್‌ರ ಜನ್ಮಭೂಮಿ. ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿ ಅಮರರಾದ ಕ್ರಾಂತಿಕಾರಿಗಳ ನಾಡಿನಲ್ಲಿ ನಾನಿರುವದು ನೆನಪಾಗಿ ನನ್ನ ಹೃದಯ ಭಾವನೆಗಳಿಂದ ಭಾರವಾಗಿತ್ತು. ದೇಶದ ಬೇರೆ ಬೇರೆ ಭಾಗಗಳಿಂದ ಆಗಮಿಸಿದ ಪ್ರತಿನಿಧಿಗಳಿಗೆ ಬೇರೆಬೇರೆ ಛತ್ರಗಳಲ್ಲಿ ಸ್ಥಳಾವಕಾಶ ಮಾಡಿತ್ತು.

ಶಹೀದ್ ಕರ್ತಾರಸಿಂಗ ನಗರ :

ಕ್ಯಾಲಿಫೋರ್ನಿಯಾದಿಂದ ಕ್ರಾಂತಿ ದೀಕ್ಷೆ ಪಡೆದು, ಬ್ರಿಟಿಷರನ್ನು ಹೊಡೆದೋಡಿಸಲು ಯೋಜಿಸಲಾಗಿದ್ದ "ಗದರ್ ವಿಪ್ಲವ"ದ ಅಗ್ರಗಣ್ಯನೇತಾರ ಹ.ಶಾತ್ಮ ಕರ್ತಾರಸಿಂಗ ಸರಾಭಾ. ಬ್ರಿಟಿಷರು ಕರ್ತಾರಸಿಂಗರನ್ನು ನೇಣುಗಂಬಕ್ಕೆ ಬಲಿಕೊಟ್ಟರೂ ನೂರಾರು ಸಾವಿರಾರು ಕರ್ತಾರಸಿಂಗರು ಜನ್ಮತಳೆದು ಬ್ರಿಟಿಷ್‌ರ ವಿರುದ್ಧ ಹೋರಾಡಿದರು. ಈ ಮಹಾನ್ ಕ್ರಾಂತಿಕಾರಿಯ ಸ್ಮರಣಾರ್ಥವಾಗಿ ಸಮ್ಮೇಳನ ನಡೆಸಲಿದ್ದ ಸ್ಥಳಕ್ಕೆ "ಕರ್ತಾರಸಿಂಗ್ ನಗರ" ಎಂಬ ಅತ್ಯಂತ ಸೂಕ್ತ ಹೆಸರನ್ನಿಡಲಾಗಿತ್ತು.

ನವೆಂಬರ್ 1, ಅಲಂಕೃತವಾಗಿ ಭವ್ಯಸಭಾಂಗಣದಲ್ಲಿ ಬೆಳಗಿನ 10 ಘಂಟೆಗೆ ಸಮ್ಮೇಳನ ಪ್ರಾರಂಭವಾಯಿತು. ಪಶ್ಚಿಮ ಬಂಗಾಳದ ಯುವನಾಯಕ ಕಾಂ. ಅಮಿತಾಬ್ ಘೋಷ್‌ರಿಂದ ಧ್ವಜಾರೋಹಣ ನಡೆಯಿತು. ಪ್ರಾರಂಭದ ಮೊದಲು ಜೀವನ ಪರ್ಯಂತ ಶೋಷಿತರಿಗಾಗಿ ಹೋರಾಡಿದ ಕಾಂ. ದಿನೇಶ್ ಮುಜುಂದಾರ ಮತ್ತಿತರ ಸಂಗಾತಿಗಳಿಗೆ ಶ್ರದ್ಧಾಂಜಲಿಯನ್ನರ್ಪಿಸಲಾಯಿತು.

ಕಲಕತ್ತಾ ವಿಶ್ವವಿದ್ಯಾಲಯದ ಉಪಕುಲಪತಿ ಡಾ॥ ಆರ್.ಕೆ. ಪೋದಾರ್‌ರು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತಾ "ಮುಸ್ಲಿಮರು ಹಾಗೂ ಬ್ರಿಟಿಷರ ಆಳ್ವಿಕೆ ಮೊದಲು ನಮ್ಮ ದೇಶ ಸುಭಿಕ್ಷವಾಗಿತ್ತು ಎಂಬ ಸುಂದರ ಕನಸಿನ ಇತಿಹಾಸವನ್ನು ನಮ್ಮ ಅನೇಕ ಇತಿಹಾಸಕಾರರು ಚಿತ್ರಿಸಿದ್ದಾರೆ. ಇದು ಅವೈಜ್ಞಾನಿಕ ವ್ಯಾಖ್ಯಾನ ಮತ್ತು ಅಪೂರ್ಣ ಜ್ಞಾನದ ಫಲ, ಈ ಭ್ರಮಾತ್ಮಕ ಇತಿಹಾಸವನ್ನು ನಮ್ಮ ಅನೇಕ ಬುದ್ಧಿ ಜೀವಿಗಳು ಒಪ್ಪಿಕೊಂಡಿದ್ದಾರೆ ಮತ್ತು ಅದನ್ನೇ ಪ್ರಚಾರ ಮಾಡುತ್ತಿದ್ದಾರೆ. ಆದರೆ ಈಗ ನಮ್ಮ ಇತಿಹಾಸವನ್ನು ಯುವಜನರಾದ ನೀವು ವಿಮರ್ಶಾತ್ಮಕ ದೃಷ್ಟಿಯಿಂದ ನೋಡಬೇಕಿದೆ. ನಾಡಿನ ವಿಭಿನ್ನ ಜನಾಂಗ, ಭಾಷೆ, ಸಂಸ್ಕೃತಿಗಳನ್ನು ಆಳುವ ವರ್ಗಗಳು ದೇಶವನ್ನು ಕೇಂದ್ರೀಯ ವ್ಯವಸ್ಥೆಗೆ ಒಳಪಡಿಸಲು ಕಾಲಾನುಕಾಲದಿಂದ ಪ್ರಯತ್ನಿಸುತ್ತಿವೆ. ಬ್ರಿಟಿಶ್ ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟಕ್ಕೆ ರಶಿಯದ ಮಹಾನ್ ಕ್ರಾಂತಿ ಸ್ಫೂರ್ತಿ ಒದಗಿಸಿದ್ದನ್ನು ಮರೆಯುವಂತಿಲ್ಲ".

"ಕೋಮುವಾದ ಮತ್ತು ಪ್ರಾಂತೀಯವಾದಗಳಂತಹ ವಿಷಚಿಂತನೆಗಳಿಂದ ನಮ್ಮ ಯುವ ಜನರ ಮಿದುಳಿಗೆ ಚಿಕಿತ್ಸೆ ಕೊಡಲು ನಮ್ಮ ದಾರಿದ್ರ್ಯ, ಮತ್ತು ಹಿಂದುಳಿದಿರುವಿಕೆಗೆ ನಿಜವಾದ ಕಾರಣಗಳೇನು ಎಂಬುದನ್ನು ಹುಡುಕುವ ಪ್ರಯತ್ನವನ್ನು ಮಾಡುವ ಹೊಣೆ ನಿಮ್ಮ ಮೇಲಿದೆ. 1857ರಲ್ಲಿ ಜರುಗಿದ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಿಂದ ಹಿಡಿದು 1947ರ ವರೆಗೆ ಜರುಗಿದ ಹಲವಾರು ಶ್ರೇಷ್ಠ ಹೋರಾಟಗಳನ್ನು ನಾವು ನೆನಪಿಗೆ ತಂದುಕೊಳ್ಳೋಣ. ಗದರ್ ವಿಪ್ಲವ, ಭಗತ್ ಸಿಂಗ್, ಚಂದ್ರಶೇಖರ ಆಝಾದ ನೇತೃತ್ವದ ಸಮಾಜವಾದಿ ಗಣರಾಜ್ಯ ಸೈನ್ಯ (HSRA), ಸುಭಾಶ್ ಭೋಸರ ಆಝಾದ ಹಿಂದ್ ಫೌಜ್ ಮತ್ತು 1945ರ ನೌಕಾಪಡೆಯ ದಂಗೆ ಮುಂತಾದವು ನಮ್ಮ ಕಣ್ಮುಂದೆ ಬರಲಿ. ಸುಮಾರು ನೂರು ವರುಷಗಳ ಕಾಲ ನಡೆದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜನತೆ ಭಾಷೆ, ಧರ್ಮ, ಜಾತಿ ಇವುಗಳನ್ನು ಮರೆತು ಮಹಾನ್ ಹೋರಾಟದಲ್ಲಿ ಸಹಭಾಗಿಗಳಾದದ್ದನ್ನು ನಾವು ಮರೆಯದಿರೋಣ".

"ಎಲ್ಲ ಮತ, ಭಾಷೆ ಮತ್ತು ಸಂಸ್ಕೃತಿಗಳ ದುಡಿಯುವ ಜನರನ್ನು, ಎಲ್ಲ ಮತ, ಭಾಷೆ ಮತ್ತು ಸಂಸ್ಕೃತಿಗೆ ಸೇರಿದ ಹಿಡಿಯಷ್ಟು ಮಂದಿ ಶೋಷಿಸುತ್ತಿದ್ದಾರೆ ಎಂಬ ಅಂಶವನ್ನು ಮರೆಮಾಚಿಸಲು ಪ್ರಯತ್ನಿಸಲಾಗುತ್ತಿದೆ. ನಮ್ಮ ಸಾಮಾನ್ಯ ಶತ್ರುವಾದ ಶೋಷಕ ಪದ್ಧತಿಯ ವಿರುದ್ಧ ಹೋರಾಡಲು ನಿಮ್ಮ ಯುವಜನ ಸಂಘಟನೆಯು ಮುಂದಾಗಲಿ ಮತ್ತು ಈ ನಾಡಿಗೆ ಅಭ್ಯುದಯವಾಗಲಿ" ಎಂದು ಹೃತ್ಪೂರ್ವಕ ಶುಭಾಷಯ ಕೋರಿ ತಮ್ಮ ಭಾಷಣವನ್ನು ಮುಗಿಸಿದರು.

ಈ ಚಾರಿತ್ರಿಕ ಯುವ ಸಮ್ಮೇಳನದ ಪ್ರತಿನಿಧಿಗಳಲ್ಲಿ ಬ್ರಿಟಿಶ್ ಸಾಮ್ರಾಜ್ಯಶಾಹಿಗಳಿಂದ ಹಿಡಿದು ಪ್ರಸಕ್ತ ಭೂಮಾಲೀಕ ಬಂಡವಾಳಶಾಹಿ ಆಡಳಿತಗಾರರ ಪೋಲೀಸ್‌ರ ಬೂಟು, ಲಾಠಿ, ಬಂದೂಕುಗಳ ರುಚಿ ಕಂಡವರಿದ್ದರು. ಅವರು ದೇಶಕ್ಕಾಗಿ ಮಾಡಿದ ತ್ಯಾಗ ಬಲಿದಾನಗಳ ಅನುಭವವನ್ನು ಕಿವಿಯಾರೆ ಕೇಳಲು ನೆರೆದಿದ್ದ ಸಂಗಾತಿಗಳು ಕಾತುರರಾಗಿದ್ದರು. ಭಾಗವಹಿಸಿದ್ದ ಪ್ರತಿನಿಧಿಗಳಲ್ಲಿ ಎಂ. ಪಿ ಗಳು, ಎಂ. ಎಲ್. ಎ.ಗಳು, ಯುವ ಕ್ರಾಂತಿಕಾರಿ ಮುಂದಾಳುಗಳು, ಬುದ್ಧಿಜೀವಿಗಳು ಸೇರಿದ್ದರು. ಸಮ್ಮೇಳನದಲ್ಲಿ ಪಾಲ್ಗೊಂಡ ನಾಲ್ವರು ಸಂಸತ್ ಸದಸ್ಯರಲ್ಲಿ ಮೂರು ಜನ ಪಶ್ಚಿಮ ಬಂಗಾಳದ, ಒಬ್ಬರು ತ್ರಿಪುರಾಕ್ಕೆ ಸೇರಿದವರಾಗಿದ್ದರು. ಏಳು ಜನ ಶಾಸಕರಲ್ಲಿ ನಾಲ್ವರು ತ್ರಿಪುರಾದ, ಇಬ್ಬರು ಪಶ್ಚಿಮ ಬಂಗಾಳದ, ಒಬ್ಬರು ತಮಿಳುನಾಡಿಗೆ ಸೇರಿದವರಾಗಿದ್ದರು. ಎಸ್. ಎಫ್. ಐ ನ ಅಖಿಲ ಭಾರತ ಅಧ್ಯಕ್ಷರಾದ ಎಂ. ಎ. ಬೇಬಿ, ಕೇರಳದ ಎಸ್.ಎಫ್.ಐ.ನ ರಾಜ್ಯಸಮಿತಿಯ ಅಧ್ಯಕ್ಷ ಹಾಗೂ ಸಂಸತ್ ಸದಸ್ಯ ಎ. ಕೆ. ಬಾಲನ್ ಆಹ್ವಾನಿತರಾಗಿ ಭಾಗವಹಿಸಿದ್ದರು.

ಸಮ್ಮೇಳನದ ಕೊನೆಯ ದಿನ ಲಾಹೋರ ಮೊಕದ್ದಮೆಯಲ್ಲಿ ಭಗತಸಿಂಗರೊಂದಿಗೆ ಅಜೀವ ಕಾರಾಗ್ರಹವಾಸದ ಶಿಕ್ಷೆ ಅನುಭವಿಸಿದ ಕಾಂ. ಕಿಶೋರಿಲಾಲ್ (ಸಧ್ಯ ಪಂಜಾಬ್ ಸಿ ಐ.ಟಿ.ಯು. ಅಧ್ಯಕ್ಷ) ಸಹ ಭಾಗವಹಿಸಿದ್ದರು.

ಪ್ರತಿನಿಧಿಗಳನ್ನು ಉದ್ದೇಶಿಸಿ ಅನೇಕರು ದೇಶವನ್ನು ಬಾಧಿಸುತ್ತಿರುವ ಅನಿಷ್ಟಗಳ ಬಗ್ಗೆ ಮಾತನಾಡುತ್ತಾ, ಈ ಅನಿಷ್ಟಗಳ ವಿರುದ್ಧವಾಗಿ ಹೋರಾಡಬೇಕಾಗಿರುವ ಅಗತ್ಯತೆಯನ್ನು ಒತ್ತಿ ಹೇಳಿದರು. ನಿರುದ್ಯೋಗ, ವರದಕ್ಷಿಣೆ ಪದ್ಧತಿ, ಮೂಢನಂಬಿಕೆಗಳು, ಜಾತಿ ಪದ್ಧತಿ, ಮಹಿಳೆಯರ ಮೇಲೆ ಅತ್ಯಾಚಾರ ಮೊದಲಾದ ದುಷ್ಟ ಪದ್ಧತಿಗಳ ವಿರುದ್ಧ ಹೋರಾಡಬೇಕಾದ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಕರಡು ಕಾರ್ಯಕ್ರಮ ಹಾಗೂ ಸಂವಿಧಾನಕ್ಕೆ ಬೆಂಬಲ ನೀಡಲಾಯಿತು.

ಚುನಾಯಿತ ಕೇಂದ್ರ ಕಾರ್ಯಕಾರಿ (ಸಿ.ಇ.ಸಿ.) ಸಮಿತಿಯಲ್ಲಿ 47 ಸದಸ್ಯರಿದ್ದು, ಅವರಲ್ಲಿ ಕರ್ನಾಟಕದ ಕಾಂ. ಶ್ರೀರಾಮರೆಡ್ಡಿಯವರೂ ಸೇರಿದ್ದಾರೆ, ಕೇಂದ್ರ ಕಾರ್ಯಕಾರಿ ಸಮಿತಿಯು ಹದಿಮೂರು ಜನ ಪದಾಧಿಕಾರಿಗಳನ್ನು ಚುನಾಯಿಸಿತು. ಅಧ್ಯಕ್ಷರಾಗಿ ಕೇರಳದ ಇ. ಪಿ. ಜಯರಾಜನ್, ಪ್ರಧಾನ ಕಾರ್ಯದರ್ಶಿಯಾಗಿ ಪ. ಬಂಗಾಲದ ಹನ್ನನ ಮೊಲ್ಲಾರು, ಖಜಾಂಚಿಯಾಗಿ ಸುಶೀಲ್‌ಚೋಪ್ರ ಆಯ್ಕೆಯಾಗಿದ್ದಾರೆ.

ಭಾಗವಹಿಸಿದ 552 ಪ್ರತಿನಿಧಿಗಳಲ್ಲಿ 197 ಜನ ಬಡರೈತ, 62 ಜನ ಕಾರ್ಮಿಕರು, 94 ಜನ ಕೃಷಿಕೂಲಿಕಾರರು 115 ಜನ ಮಧ್ಯಮವರ್ಗದ ಬುದ್ಧಿಜೀವಿಗಳು, 11 ಜನ ಚಿಕ್ಕ ಕೈಗಾರಿಕೋದ್ಯಮಿಗಳು, 60 ಜನ ಕುಶಲ ಕೆಲಸಗಾರರು ಮತ್ತು 13 ಜನ ಉಚ್ಚವರ್ಗದವರಿದ್ದರು.

ಸಮ್ಮೇಳನಕ್ಕೆ ಪಶ್ಚಿಮ ಬಂಗಾಲದ ಮುಖ್ಯಮಂತ್ರಿ ಜ್ಯೋತಿ ಬಸು, ಕೇರಳದ ಮುಖ್ಯಮಂತ್ರಿ ಇ.ಕೆ.ನಯನಾರ್, ತ್ರಿಪುರಾ ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿ, ಅಖಿಲ ಭಾರತ ಕಿಸಾನ್ ಸಭಾ ಪ್ರಧಾನ ಕಾರ್ಯದರ್ಶಿ ಜಾತುನ್ನಿಮಾಸ್ತರ್ ಹಾಗೂ ವಿಯಟ್ನಾಂ, ಬ್ರಿಟನ್, ರಷ್ಯಾ ಮತ್ತು ಭಾರತದ ಇತರ ಯುವಜನ ಸಂಘಟನೆಗಳು ಶುಭಾಶಯಗಳನ್ನು ಕಳಿಸಿದ್ದರು.

ಸಮ್ಮೇಳನದ ಕೊನೆಯ ದಿನ ಸುಮಾರು 10,000 ಯುವಕರು ಪಾಲ್ಗೊಂಡ ಬೃಹತ್ ಮೆರವಣಿಗೆ, ಬಹಿರಂಗ ಸಭೆ ನಡೆಯಿತು, ಪಂಜಾಬ್ ನೌಜವಾನ್ ಯುವಜನ ಸಭಾ ಅಧ್ಯಕ್ಷ ದರ್ಬಾರ್‌ಸಿಂಗರು ಅಧ್ಯಕ್ಷತೆ ವಹಿಸಿದ್ದರು. ನೆರೆದಿದ್ದ ಯುವಕರನ್ನು ಉದ್ದೇಶಿಸಿ ಪಶ್ಚಿಮ ಬಂಗಾಲದ ಮುಖ್ಯಮಂತ್ರಿ ಕಾಂ.ಜ್ಯೋತಿಬಸು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯ ಹಾಗೂ ರಾಜ್ಯಸಭಾ ಸದಸ್ಯ ಕಾಂ.ಹರೇಕೃಷ್ಣ ಸಿಂಗ್ ಸುರ್ಜೀತ್ ಇವರುಗಳು ಮಾತನಾಡಿದರು. ಈ ಕಾರ್ಯಕ್ರಮದ ನಂತರ ಯುವಜನರ ಐತಿಹಾಸಿಕ ಸಮ್ಮೇಳನ ಮುಕ್ತಾಯವಾಯಿತು.

ಸುಮಾರು 4-5 ದಿನ ಜೊತೆಯಲಿದ್ದ ಬೇರೆಬೇರೆ ರಾಜ್ಯಗಳ ಸಂಗಾತಿಗಳನ್ನು ಅಗಲುವಾಗ ತುಂಬಾ ನೋವಾಯಿತು. ಹೊಸ ಅನುಭವ, ಆಶೋತ್ತರಗಳನ್ನು, ನಮ್ಮ ರಾಜ್ಯದಲ್ಲೂ ಬಲಿಷ್ಠ ಸಂಘಟನೆಯನ್ನು ಕಟ್ಟುವ ಅಪಾರ ಹೊಣೆಗಾರಿಕೆಯನ್ನು ಹೊತ್ತು ಮರಳಿದೆವು.

ವರದಿ : ಎಸ್. ಶಿವರಾಂ

ಬಂಡವಾಳಶಾಹಿ ಜಗತ್ತಿನಲ್ಲಿ ಕಾರ್ಮಿಕರ ಹೋರಾಟಗಳು

೯೭೦ರ ಆರಂಭದಿಂದಲೂ ಸಾಮ್ರಾಜ್ಯಶಾಹಿ ಗುತ್ತೇದಾರಿಗಳ ವಿರುದ್ಧ ಕಾರ್ಮಿಕ ಜನತೆ ಹೊಸ ಚಟುವಟಿಕೆಗಳನ್ನು ತೋರಿಸುತ್ತಿದ್ದಾರೆ. ಪಾಶ್ಚಾತ್ಯ ಜಗತ್ತಿನ ಇವತ್ತಿನ ವರ್ಗ ಹೋರಾಟದ ಅತ್ಯಂತ ಗಮನಾರ್ಹವಾದ ಅಂಶ ಎಂದರೆ ಹೆಚ್ಚುತ್ತಿರುವ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಮುಷ್ಕರ ಚಳುವಳಿಯ ವ್ಯಾಪ್ತಿ ಹೆಚ್ಚುತ್ತಿರುವುದು ಕಾರ್ಮಿಕರ ಟ್ರೇಡ್‌ಯೂನಿಯನ್‌ಗಳು ಬಂಡವಾಳಶಾಹಿಯೊಡನೆ ಹೂಡುತ್ತಿರುವ ಸಮರಗಳು, ಇಂಥ ವಿಪರೀತ ಕಷ್ಟಕರ ಪರಿಸ್ಥಿತಿಯಲ್ಲೂ ಅವು ಹೋರಾಡಲೇಬೇಕೆಂಬ ದೃಢ ನಿಶ್ಚಯವನ್ನು ಮಾಡಿರುವುದನ್ನು ತೋರಿಸುತ್ತದೆ.

ಅಮೇರಿಕಾದಲ್ಲಿ

ಅಮೇರಿಕಾ ದೇಶದ ಉದ್ದಗಲಕ್ಕೂ ಕಾರ್ಮಿಕರ ಹೋರಾಟಗಳು ನಡೆಯುತ್ತಿವೆ. ಏಕಸ್ವಾಮ್ಯಗಳ ವಿರುದ್ಧ ಕಾರ್ಮಿಕ ಜನತೆ ಉಗ್ರವಾಗಿ ಹೋರಾಡಲು ಆರಂಭಿಸಿದ್ದಾರೆ. ಕೆಲಸದಿಂದ ವಜಾ ಮಾಡುತ್ತೇವೆಂಬ ಬೆದರಿಕೆ ಇದ್ದರೂ ಈ ಜನವರಿಯೊಂದರಲ್ಲಿಯೇ 3.1 ಮಿಲಿಯನ್ ದುಡಿಮೆ ದಿನಗಳು ಮುಷ್ಕರದಿಂದ ನಷ್ಟವಾಗಿವೆ. ಇಂಜಿನಿಯರಿಂಗ್, ಮೆಟಲರ್ಜಿ, ವಿದ್ಯುತ್, ತಾಂತ್ರಿಕ, ಸಾರಿಗೆ ಕೆಲಸಗಾರರು ವರ್ಗಹೋರಾಟಕ್ಕೆ ದಾರಿ ಮಾಡಿಕೊಟ್ಟಿದ್ದಾರೆ.

ಜನವರಿ 9 ರಿಂದ ಆರಂಭವಾದ, ರಾಷ್ಟ್ರದಾದ್ಯಂತದ 60,000 ಪೆಟ್ರೋಲಿಯಂ ಕೆಲಸಗಾರರ ಮುಷ್ಕರ ತುಂಬ ಮುಖ್ಯವಾದುದು. ಅಮೆರಿಕಾದ ಭಾರಿ ಕಂಪೆನಿಯಾದ ಇಂಟರ್‌ನ್ಯಾಷನಲ್ ಹಾರ್ವೆಸ್ಟರ್‌ನ ಹದಿನೇಳು ಕೈಗಾರಿಕೆಗಳಿಗೂ ಈ ಮುಷ್ಕರ ಹಬ್ಬಿತು. ಅದೇ ವೇಳೆಗೆ ಪ. ವರ್ಜೀನಿಯದ 5000 ಕಲ್ಲಿದ್ದಲು ಕೆಲಸಗಾರರು ಮುಷ್ಕರ ಹೂಡಿದರು. ಅಮೆರಿಕದ ಶಾಸನದಲ್ಲಿ ಸರ್ಕಾರಿ ಉದ್ಯಮದಲ್ಲಿ ಮುಷ್ಕರ ನಿಷೇಧಿತವಾಗಿದ್ದರೂ ಸರ್ವೀಸ್ ವಲಯದ ಉದ್ಯೋಗಿಗಳು ದುಡಿಯುವ ಜನರ ಮುಷ್ಕರಗಳಲ್ಲಿ ಕ್ರಿಯಾಶೀಲ ಪಾತ್ರ ವಹಿಸುತ್ತಿದ್ದಾರೆಂಬುದು ತೀರ ಗಮನಾರ್ಹ.

ಹಣದುಬ್ಬರಕ್ಕೆ ಪರಿಹಾರವಾಗಿ ಹೆಚ್ಚು ವೇತನಗಳಿಗಾಗಿ ಹೋರಾಡಿದ ನ್ಯೂಯಾರ್ಕಿನ 38,000 ಸಾರಿಗೆ ನೌಕರರ ಮುಷ್ಕರ ತುಂಬ ಮುಖ್ಯವಾದುದು. 6400 ಸಬ್‌ವೇ ಕಾರುಗಳು 4550 ಬಸ್ಸುಗಳು ಆಗ ಕೆಲಸ ಮಾಡದೆ ನಿಂತಿದ್ದವು. ಇದು ಲಾಂಗ್ ಐಲೆಂಡಿಗೂ ಹಬ್ಬಿತು. ಅಮೇರಿಕದ ನಗರಗಳ ಮುನಿಸಿಪಲ್ ಕಾರ್ಮಿಕರು, ಚಿಕಾಗೋನ ಅಗ್ನಿಶಾಮಕ ದಳದವರು, ಪ್ರಾವಿಡೆನ್ಸ್ ಪ್ರಾಂತದ ಹೋಟೆಲ್ ಮತ್ತು ಮುನಿಸಿಪಲ್ ಉದ್ಯೋಗಿಗಳು, ಡೆಟ್ರಾಯಿಟ್‌ನ ಶಾಲಾ ಅಧ್ಯಾಪಕರು, ಮುಷ್ಕರಗಳನ್ನು ನಡೆಸಿದರು.

ಅಮೆರಿಕದಲ್ಲಿ ಅತ್ಯಂತ ದಮನಕ್ಕೊಳಗಾದ ವರ್ಗವಾದ ಕೃಷಿಕಾರ್ಮಿಕರು ಈಗ ಹೆಚ್ಚು ಹೆಚ್ಚು ಮುಷ್ಕರ ಚಳುವಳಿಯಲ್ಲಿ ನಿರತರಾಗುತ್ತಿದ್ದಾರೆ. ಕ್ಯಾಲಿಫೋರ್ನಿಯಾದ ಫಾರಂ ಕೆಲಸಗಾರರು 58 ವಾರಗಳ ಕಾಲ ಮುಷ್ಕರ ನಡೆಸಿ ತಮ್ಮ ಕೆಲವು ಬೇಡಿಕೆಗಳನ್ನು ಈಡೇರಿಸಿಕೊಂಡರು.

ಬ್ರಿಟನ್ನಿನಲ್ಲಿ

ಉಕ್ಕು ಕೆಲಸಗಾರರ ಬ್ರಿಟನ್ನಿನಾದ್ಯಂತ ಮುಷ್ಕರದೊಡನೆ ಹೊಸ ವರ್ಷ ಉದಯವಾಯಿತು. ಅದರಿಂದ ಶೇ. 18 ರಷ್ಟು ವೇತನ ಏರಿತು. ಜನವರಿ ಎರಡರಿಂದ ಏಪ್ರಿಲ್ ಎರಡರ ವರೆಗೆ 130,000 ಉಕ್ಕು ಕೆಲಸಗಾರರು ಇಳಿಯುತ್ತಿರುವ ಜೀವನ ಮಟ್ಟ, ಟೋರಿಗಳ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಹೋರಾಡಿದರು.

ದೇಶದ ಎಲ್ಲ ಕಾರ್ಮಿಕರು ಮುಷ್ಕರಗಾರರ ಜೊತೆ ಬೆಂಬಲವಾಗಿ ನಿಂತರು. ಗಣಿಕಾರ್ಮಿಕರು, ಡಾಕ್ ಕೆಲಸಗಾರರು, ಟ್ರಕ್ ಚಾಲಕರು, ರೈಲ್ವೆ ಕಾರ್ಮಿಕರು ಬ್ರಿಟನ್ನಿನ ಟ್ರೇಡ್ ಯೂನಿಯನ್ ಕಾಂಗ್ರೆಸ್ ಇವರಿಗೆ ಬೆಂಬಲ ನೀಡಿದರು, ಪ. ಜರ್ಮನಿ, ಬೆಲ್ಜಿಯಂ, ಹಾಲೆಂಡ್‌ಗಳ ಉಕ್ಕು ಕೆಲಸಗಾರರು, ಬ್ರಿಟನ್ನಿನ ಆರ್ಡರ್‌ಗಳಿಗೆ ಉಕ್ಕು ತಯಾರಿಸಲು ನಿರಾಕರಿಸಿದರು. ಬ್ರಿಟನ್ನಿನ ಸರ್ಕಾರ ಮುಷ್ಕರವನ್ನು ಹತ್ತಿಕ್ಕಲು ಪೋಲೀಸ್ ಮುಂತಾದ ಎಲ್ಲ ಸಾಧನಗಳನ್ನೂ ಬಳಸಿತು.

ಫ್ರಾನ್ಸ್‌ನಲ್ಲಿ

ಫ್ರಾನ್ಸಿನ ವರ್ಗಹೋರಾಟಗಳು ಉನ್ನತ ಮಟ್ಟದಲ್ಲಿವೆ. ಸರ್ಕಾರದ ಆರ್ಥಿಕ ನೀತಿಯನ್ನು ಕಾರ್ಮಿಕರು ಉಗ್ರವಾಗಿ ಖಂಡಿಸುತ್ತಾರೆ.

ಫ್ರಾನ್ಸಿನಾದ್ಯಂತ ಗ್ಯಾಸ್ ಮತ್ತು ಎಲೆಕ್ಟ್ರಿಕಲ್ ಕಾರ್ಮಿಕರು ಮುಷ್ಕರ ಹೂಡಿದರು. ಶಿಕ್ಷಣ ರಂಗದ 200 000 ಕೆಲಸಗಾರರು ಮುಷ್ಕರ ಹೂಡಿದ್ದು ಒಂದು ವಿಶೇಷ. ಇವರು ಉದ್ಯೋಗ ಭದ್ರತೆಯನ್ನು ಒತ್ತಾಯಿಸಿದ್ದರು.

ಸಬ್‌ವೇ ಕೆಲಸಗಾರರು ಆರುವಾರಗಳ ಮುಷ್ಕರ ನಡೆಸಿದರು. ದೇಶದ 42 ವಿಭಾಗಗಳಲ್ಲಿ 1024 ಮುಷ್ಕರಗಳು ಕಳೆದ ಮಾರ್ಚ್ ಒಂದರಲ್ಲೇ ನಡೆದಿವೆ ತಮ್ಮ ಸದ್ಯದ ಅಗತ್ಯಗಳಲ್ಲದೆ, ತೀವ್ರ ಆರ್ಥಿಕ ಮತ್ತು ರಾಜಕೀಯ ಸುಧಾರಣೆಗಳ ಬೇಡಿಕೆಗೂ ಕಾರ್ಮಿಕರು ಮುಷ್ಕರ ನಡೆಸುತ್ತಿರುವುದು ಗಮನಾರ್ಹವಾಗಿದೆ. ಪ್ರಜಾಪ್ರಭುತ್ವದ ಸ್ವಾತಂತ್ರ್ಯಗಳು ಮತ್ತು ಟ್ರೇಡ್‌ಯೂನಿಯನ್ ಹಕ್ಕುಗಳ ದಮನದ ವಿರುದ್ಧ ಪ್ರದರ್ಶನ ನಡೆಸಲು ಫ್ರೆಂಚ್ ಕಮ್ಯುನಿಸ್ಟ್ ಪಕ್ಷ ಕೊಟ್ಟಿದ್ದ ಕರೆಯ ಮೇರೆಗೆ 5000 ಮಂದಿ ಅಲ್ಲಿ ನೆರೆದಿದ್ದರು.

ಇಟಲಿಯಲ್ಲಿ

ಜನವರಿ 15 ರಂದು ದೇಶದಾದ್ಯಂದ ಹೋರಾಟದ ದಿನ ಆಚರಿಸಲಾಯಿತು. ಇದು ರಾಜಕೀಯ ಸ್ವರೂಪದಿಂದ ಕೂಡಿತ್ತು. ಆ ದಿನ ಕೈಗಾರಿಕೆಗಳು, ಸಚಿವಾಲಯಗಳು, ಇಲಾಖೆಗಳು ಮುಚ್ಚಿದ್ದವು. ರೈತರು ಮನೆಯಲ್ಲಿದ್ದರೆ. ಎಂಟುಗಂಟೆಗಳ ಮುಷ್ಕರಕ್ಕೆ ಟ್ರೇಡ್‌ಯೂನಿಯನ್‌ಗಳು ನೀಡಿದ್ದ ಕರೆಗೆ ಅನುಸಾರವಾಗಿ 14 ಮಿಲಿಯನ್ ಜನರು ಮುಷ್ಕರ ಹೂಡಿದರು.

ಸ್ವೀಡನ್‌ನಲ್ಲಿ

ಕೈಗಾರಿಕೆಗಳು, ಕಾರ್ಖಾನೆಗಳು, ಹೋಟೆಲ್‌ಗಳು, ಅಂಗಡಿಗಳ ಗೇಟುಗಳ ಮೇಲೆ "ಮುಷ್ಕರ" "ಬೀಗಮುದ್ರೆ" ಎಂಬ ಫಲಕಗಳೇ ಕಳೆದ ಏಪ್ರಿಲ್‌ನಲ್ಲಿ ಕಾಣಿಸುತ್ತಿದ್ದವು. ವಿಮಾನಸಾರಿಗೆ ಕೂಡ ಮುಷ್ಕರದಿಂದ ಅಸ್ತವ್ಯಸ್ತವಾಗಿತ್ತು, ಇತರ ಸಾರಿಗೆಕೂಡ ನಿಂತಿತ್ತು. ದೇಶದಾದ್ಯಂತ ಒಂದು ಮಿಲಿಯನ್ ಕಾರ್ಮಿಕರು ಮುಷ್ಕರ ಹೂಡಿದ್ದರು. ಬೆಲೆಗಳು ತೀವ್ರವಾಗಿ ಏರಿದ್ದರೂ ಮಾಲೀಕರು ವೇತನ ಹೆಚ್ಚಿಸಲು ಒಪ್ಪಿರಲಿಲ್ಲ ಸ್ವೀಡಿಷ್ ಉದ್ಯಮಿಗಳ ಸಂಘವು ಬೀಗಮುದ್ರೆ ಘೋಷಿಸಿತ್ತು. ಆದರೆ ಮುಷ್ಕರದ ರಾಜಕೀಯ ಪರಿಣಾಮಗಳಿಗೆ ಹೆದರಿ ಕೆಲವು ರಿಯಾಯಿತಿಗಳನ್ನು ನೀಡಿತು.

ಜಪಾನ್‌ನಲ್ಲಿ

38 ವಲಯಗಳ ಟ್ರೇಡ್‌ಯೂನಿಯನ್‌ಗಳ ಒಕ್ಕೂಟವಾದ ಕೌನ್ಸಿಲ್ ಫಾರ್ ಜಾಯಿಂಟ್ ಸ್ಪ್ರಿಂಗ್ ಸ್ಟ್ರಗಲ್‌ನಲ್ಲಿ 9,000,000 ಸದಸ್ಯರು ಇದ್ದಾರೆ. ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಇವರು ಮುಷ್ಕರ ಹೂಡಿದರು. ಟೋಕಿಯೋ, ಒಸಾಕ, ಸೆಂಡಾರ್, ನಗಾನೋ ಮತ್ತಿತರ ನಗರಗಳಲ್ಲಿ ಉಕ್ಕು ಕಾರ್ಮಿಕರು, ಅಧ್ಯಾಪಕರು, ಮುನಿಸಿಪಲ್ ಕಾರ್ಮಿಕರು ಮುಷ್ಕರ ಹೂಡಿದ್ದರು.

ಏಪ್ರಿಲ್ 16ರಂದು ಜಪಾನಿನ ರೈಲ್ವೆ ಮುಷ್ಕರದಿಂದ ದೇಶದ ಸಾರಿಗೆಯ ಬೆನ್ನೆಲುಬಾದ 243 ಮುಖ್ಯ ರೈಲ್ವೆ ಮಾರ್ಗಗಳು ಸ್ಥಗಿತಗೊಂಡಿದ್ದವು ಉಗ್ರ ಶಿಕ್ಷೆಯ ಬೆದರಿಕೆ ಹಾಕಿದ್ದರೂ, ಬಸ್ಸು, ಸಬ್‌ವೇ, ಸ್ಟ್ರೀಟ್ ಕಾರ್‌ಗಳ ಕೆಲಸಗಾರರು ಇವರ ಜೊತೆ ಸೌಹಾರ್ದತೆ ಸೂಚಿಸಿದರು. ಉಗ್ರ ಮಿಲಿಟರಿ ತಯಾರಿಯನ್ನು ನಿಲ್ಲಿಸಬೇಕೆಂದು "ಸ್ಪ್ರಿಂಗ್ ಅಫೆನ್ಸಿವ್" ಬೇಡಿಕೆ ಮುಂದಿಟ್ಟಿತ್ತು.

ಕಾರ್ಮಿಕರು ತಮ್ಮ ಸಾಮಾಜಿಕ ಮತ್ತು ಆರ್ಥಿಕ ಸ್ಥಾನವನ್ನು ಏರಿಸಿಕೊಳ್ಳಲು ಮುಷ್ಕರಗಳೇ ಸಾಧನವೆಂಬುದನ್ನು ಬಂಡವಾಳಶಾಹಿ ದೇಶಗಳ ವರ್ಗಕದನಗಳು ತೋರಿಸುತ್ತವೆ. ಸರ್ಕಾರದ ಏಕಸ್ವಾಮ್ಯ ದಮನಕ್ಕೆ ಇರುವ ವಿರೋಧವನ್ನು ಮುಷ್ಕರಗಳು ಪ್ರತಿಬಿಂಬಿಸುತ್ತವೆ.

ಜೀವನವೆಚ್ಚಕ್ಕೆ ತಕ್ಕಂಥ ವೇತನ, ನಿರುದ್ಯೋಗ ನಿವಾರಣೆ, ನಿವೃತ್ತಿ ವಯಸ್ಸಿನ ಏರಿಕೆ, ಸಂಘಟನಾ ಸ್ವಾತಂತ್ರ್ಯ, ವೈದ್ಯಕೀಯ ಸೌಲಭ್ಯ ಇವುಗಳನ್ನು ಕಾರ್ಮಿಕರು ಬಯಸುತ್ತಿದ್ದಾರೆ ದೇಶದಾದ್ಯಂತ ಮುಷ್ಕರ ಹೂಡುವುದು ಇವತ್ತಿನ ದಿನಗಳ ವಿಶೇಷ ಅಂಶವಾಗಿದೆ.

●

ಮತೀಯ ದುರಭಿಮಾನಿ ವರ್ತನೆ

ಶಿವಮೊಗ್ಗೆಯ ದೇಶೀಯ ವಿದ್ಯಾಶಾಲೆಗೆ ಖಂಡನೀಯವಾದ ಒಂದು ಪರಂಪರೆ ಇದೆ. ಆ ಸಂಸ್ಥೆಯ ಆಡಳಿತ ಯಂತ್ರವು ಬಹುಮಟ್ಟಿಗೆ ಗೋಲ್ವಾಲ್ಕರ್-ದೇವರಸ್ ಚೇಲಾಗಳ ಹಿಡಿತದಲ್ಲೇ ಇದೆ. ಆದ್ದರಿಂದ ಧರ್ಮ ನಿರಪೇಕ್ಷಾ ಬುದ್ಧಿಗೆ ಬದಲಾಗಿ ಆ ಸಂಸ್ಥೆ ಯಾವಾಗಲೂ ಮತೀಯ ದುರಭಿಮಾನದ ಬೀಜವನ್ನೇ ಬಿತ್ತುತ್ತಾ ಬಂದಿದೆ, ಕೆಲವರ್ಷಗಳ ಹಿಂದೆ ಅದೇ ಸಂಸ್ಥೆಯ ಇತಿಹಾಸದ ಅಧ್ಯಾಪಕರೊಬ್ಬರನ್ನು ಕೆಲಸದಿಂದ ವಜಾ ಮಾಡಲಾಗಿತ್ತು. ಅದನ್ನು ಪ್ರತಿಭಟಿಸಿ ಅನೇಕ ಧರಣಿ ಸತ್ಯಾಗ್ರಹಗಳು ನಡೆದುವು. ಕಡೆಗೆ ಕೋರ್ಟಿನಲ್ಲಿ ಅಧ್ಯಾಪಕರ ಪರವಾದ ತೀರ್ಪು ಬಂದಿತು.

ಈಗ ಅದೇ ಸಂಸ್ಥೆಯು ತನ್ನ ಕರಾಳತೆಯ ಇನ್ನೊಂದು ಘಟ್ಟವನ್ನು ತಲುಪಿರುವಂತೆ ತೋರುತ್ತದೆ. ಅಧ್ಯಾಪಕ ಸತ್ಯನಾರಾಯಣರಾವ್ ಅಣತಿಯವರು ಏನೋ ಗಲಭೆಯಲ್ಲಿ ಪಾಲ್ಗೊಂಡರೆಂಬಂತೆ ಅರ್ಥಬರುವ ಆಪಾದನೆಯೊಂದನ್ನು ಅವರ ಮೇಲೆ ಹೊರಿಸಿ ಅವರಿಗೆ ಆಡಳಿತ ವರ್ಗ ಕಿರುಕುಳ ಕೊಡಲಾರಂಭಿಸಿದೆ. "ಚಾರ್ವಾಕ" ಎಂಬ ನಾಟಕವೊಂದನ್ನು ರಚಿಸಿರುವ ಶ್ರೀಯುತರ ವೈಜ್ಞಾನಿಕ ರಚನಾತ್ಮಕ ತತ್ವಗಳು ಆರೆಸ್ಸೆಸ್ ಮನೋಭಾವದ ಆಡಳಿತ ಸಂಸ್ಥೆಗೆ ರುಚಿಸದಿರಬಹುದು. ಆದರೆ ಆ ಕಾರಣಕ್ಕಾಗಿ ಅವರ ಪ್ರಜಾಪ್ರಭುತ್ವದ ಹಕ್ಕುಗಳನ್ನು ಮೊಟಕುಗೊಳಿಸುವ ಆಡಳಿತ ಸಂಸ್ಥೆಯ ದುರಹಂಕಾರಿ ಪ್ರವೃತ್ತಿ ನಿಜಕ್ಕೂ ಖಂಡನೀಯ. ದತ್ತಾಬಾಳ್ ಎಂಬ ತಕ್ಕನ ತತ್ವಜ್ಞಾನಿಯೊಬ್ಬ ಆಧುನಿಕ ವಿಜ್ಞಾನವೆಲ್ಲಾ ನಮ್ಮ ಪ್ರಾಚೀನ ಗ್ರಂಥಗಳಲ್ಲೇ ಇದೆಯೆಂದು ಪ್ರಲಪಿಸುವ ಬಾಲಿಶ ಗ್ರಂಥಕರ್ತ, ಭಾಷಣಕಾರ, ಆತನ ಮೌಢ್ಯವನ್ನು ಧಿಕ್ಕರಿಸಿ ಆತನನ್ನು ಬಯಲಿಗೆಳೆಯುವುದು ಬೌದ್ಧಿಕವಾಗಿ ಭಾರತದ ಪ್ರತಿಯೊಬ್ಬ ಪ್ರಜೆಯ ಹಕ್ಕು ಆಗಿದೆ. ಶ್ರೀ ಅಣತಿಯವರು ಈ ದತ್ತಾಬಾಳನ ಮೂರ್ಖಬಾನನ್ನು ಪ್ರಶ್ನಿಸಿದ್ದೇ ಅವರ ಅಪರಾಧವೆಂದು ದೇಶೀಯ ವಿದ್ಯಾಶಾಲೆಯ ಅಜ್ಞ ಆಡಳಿತಗಾರರಿಗೆ ತೋರಿದೆ ಶ್ರೀ ಅಣತಿಯವರ ಬೌದ್ಧಿಕ ಕ್ರಿಯಾಶೀಲತೆಯನ್ನು ತುಂಡರಿಸುವ ಹಕ್ಕು ಈ ವಿದ್ಯಾಶಾಲೆಗಿಲ್ಲವೆಂಬುದನ್ನು ಪ್ರತಿಭಟನೆಗಳ ಮೂಲಕ ಸಂಬಂಧಪಟ್ಟ ಅಧಿಕಾರಿಗಳಿಗೆ ಮುಟ್ಟಿಸಬೇಕಾಗಿದೆ. ಖಾಸಗಿ ಶಿಕ್ಷಣ ಸಂಸ್ಥೆಯೊಂದರಲ್ಲಿ ಅಧ್ಯಾಪಕನಾಗಿ ಕೆಲಸಮಾಡುತ್ತಿರುವ ನಾನೂ ಶಿವಮೊಗ್ಗೆಯ ದೇಶೀಯ ವಿದ್ಯಾಶಾಲೆಯ ದುರ್ನಡತೆಯನ್ನು ಮತ್ತು ದುರಾಡಳಿತವನ್ನು ವಿರೋಧಿಸುತ್ತೇನೆ ಮತ್ತು ಖಂಡಿಸುತ್ತೇನೆ.

ಕೆಲವು ತಿಂಗಳುಗಳ ಹಿಂದೆ ಸಾಯಿಬಾಬಾ ಭಕ್ತವೃಂದದಲ್ಲಿ ಅಗ್ರಗಣ್ಯರಾದ ಶ್ರೀ.ವಿ.ಕೆ. ಗೋಕಾಕ್ ಅವರು ಮೈಸೂರಿನ ಒಂದು ಸಭೆಯಲ್ಲಿ ಭಾಗವಹಿಸುತ್ತಿದ್ದಾಗ ಅಧ್ಯಾಪಕರೊಬ್ಬರು ಸಭೆಯಲ್ಲೇ ಅವರೊಡನೆ ಚರ್ಚೆಗೆ ಇಳಿದರು. ಅಂದಿನ ಸಭೆ ಅಲ್ಲಿಗೇ ಮುಕ್ತಾಯವಾಯಿತು ಕೂಡ, ಸದರಿ ಅಧ್ಯಾಪಕರಿಗೆ ಅವರ ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯು ಯಾವ ಚಾರ್ಜ್‌ಶೀಟನ್ನೂ ಕೊಡಲಿಲ್ಲವೆಂಬುದು ಗಮನಾರ್ಹ. ಶಿವಮೊಗ್ಗೆಯ ದೇಶೀಯ ವಿದ್ಯಾಶಾಲೆಯ "ಸುಸಂಸ್ಕೃತ" ಆಡಳಿತ ವರ್ಗಕ್ಕೆ ಬೌದ್ಧಿಕ ವಾತಾವರಣವೆಂದರೆ ಜುಗುಪ್ಸೆ ಇರಬೇಕು. ಅವರ ಮೂರ್ಖತನವನ್ನು ಪ್ರಶ್ನಿಸುವವರ ವಿರುದ್ಧ ಅವರಿಗೆ ವಿಪರೀತ ಅಸಮಾಧಾನ! ಆದ್ದರಿಂದಲೇ ಅಣತಿಯವರ ವಿರುದ್ಧ ಅವರ ಕೊಡಲಿ ಪೆಟ್ಟು. ವಿದ್ಯಾಸಂಸ್ಥೆಗಳು ಇಂತಹ ಸಂಕುಚಿತ ಮನೋಭಾವವುಳ್ಳವರ ಕೈಗಳಲ್ಲಿದ್ದು ಇಡೀ ಬೌದ್ಧಿಕ ವ್ಯವಸಾಯಕ್ಕೆ ಅಡ್ಡಿಯಾಗಿದೆ. ಇಂತಹ ಸಂಸ್ಥೆಗಳ ದುಷ್ಕಾರ್ಯವನ್ನು ತಡೆಯಲು ಅವನ್ನು ಮೊದಲು ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳಬೇಕು. ದತ್ತಾಬಾಳನ ವಾನರ ಸೈನ್ಯವು ಶಿಕ್ಷಣ ಕ್ಷೇತ್ರವನ್ನು ಧ್ವಂಸಮಾಡುವ ಮುನ್ನ ಈ ಕೆಲಸ ನಡೆಯಬೇಕು. ಅಣತಿಯವರ ಮೇಲಿನ ಗದಾಪ್ರಹಾರ ಸ್ವತಂತ್ರ ಬೌದ್ಧಿಕ ಕ್ರಿಯೆಯ ಮೇಲೆ ನಡೆದಿರುವ ಆಘಾತ. ಅದನ್ನು ಸಂಪೂರ್ಣವಾಗಿ ಧಿಕ್ಕರಿಸೋಣ.

—ಡಾ|| ಜಿ. ರಾಮಕೃಷ್ಣ

ಹಸಿವು ಮತ್ತು ಬಡತನದ ವಿರುದ್ಧ ಹೋರಾಟ

ಫಿಡೆಲ್ ಕ್ಯಾಸ್ಟ್ರೋ

ಲ್ಯಾಟಿನ್ ಅಮೆರಿಕದ ಹದಿನಾರನೇ ಆಹಾರ ಮತ್ತು ಕೃಷಿವ್ಯವಸ್ಥೆಯ ಪ್ರಾದೇಶಿಕ ಸಮ್ಮೇಳನದಲ್ಲಿ ಮಾತನಾಡುತ್ತಿದ್ದ ಫಿಡೆಲ್ ಕ್ಯಾಸ್ಟ್ರೋ ಅವರು, ಅನಭಿವೃದ್ಧಿ ದೇಶಗಳ ಬೆಳವಣಿಗೆ, ಹಸಿವು, ಬಡತನಗಳ ಸಮಸ್ಯೆಗಳನ್ನು ಕುರಿತು ವಿಶ್ಲೇಷಿಸಿದರು. ಈ ಸಮ್ಮೇಳನದ ಕಾರ್ಯವು, ಇಡೀ ಮಾನವ ಸಮುದಾಯದ ಕೃಷಿ ಪ್ರಗತಿಯ ಪ್ರಾಮುಖ್ಯತೆಯನ್ನು ಒತ್ತಾಯಿಸಲು ಸಹಾಯ ಮಾಡುತ್ತದೆ ಎಂದರು.

ಐದು ವರ್ಷಗಳ ಹಿಂದೆ ರೋಮ್‌ನಲ್ಲಿ ನಡೆದ ವಿಶ್ವಆಹಾರ ಸಮ್ಮೇಳನದಲ್ಲಿ ಜಗತ್ತಿನ ಪ್ರತಿನಿಧಿಗಳೆಲ್ಲ ಸೇರಿದ್ದರು. ಮಾನವ ಸಮುದಾಯದ ಆಹಾರ ಸಮಸ್ಯೆಗಳನ್ನು ಬಗೆಹರಿಸಬೇಕಾದ ತುರ್ತಿನ ಅಗತ್ಯವನ್ನು ಅಲ್ಲಿ ಮುಂದಿಡಲಾಯಿತು, ಆದರೆ ಅಮೆರಿಕ ಮುಂತಾದ ಮುಂದುವರೆದ ದೇಶಗಳು ರಾಜಕೀಯ, ತಾಂತ್ರಿಕ ಕಾರಣಗಳಿಗಾಗಿ ಈಗಾಗಲೇ ಬದ್ಧರಾಗಿರುವ ಜಿಪುಣತನದ ಬಗ್ಗೆ ಕೊಂಚ ನಿರಾಶೆಯ ಭಾವನೆಯೂ ಅಲ್ಲಿತ್ತು. ತಮ್ಮ ಹೆಚ್ಚುವರಿ ಸಂಪತ್ತನ್ನು ಜಗತ್ತಿನ ಹಸಿವನ್ನು ನೀಗಲು ಈ ಅಭಿವೃದ್ಧಿ ಹೊಂದಿರುವ ದೇಶಗಳು ಸಾಮೂಹಿಕವಾಗಿ ತೊಡಗಿಸಿದರೆ, ಅನೇಕ ದೇಶಗಳಲ್ಲಿ, ಅದರಲ್ಲೂ ಮೂರನೇ ಜಗತ್ತಿನಲ್ಲಿ ಇರುವ ಪೌಷ್ಟಿಕಾಂಶದ ಕೊರತೆಯ ತೀವ್ರ ಸಮಸ್ಯೆಯನ್ನು ಪರಿಹರಿಸಬಹುದಾಗಿತ್ತು.

ಹಸಿವು ನಮ್ಮ ಜೊತೆಗಿದೆ

ದುರಾದೃಷ್ಟದಿಂದ ಹಸಿವು ಇನ್ನೂ ನಮ್ಮ ಜೊತೆಗಿದೆ. ಹಿಂದೊಮ್ಮೆ ಯೂರೋಪು ಮುಂತಾದ ಭಾಗಗಳಲ್ಲಿ ತಲೆದೋರಿದ ವಿನಾಶಕಾರಿ ಮತ್ತು ನಾಟಕೀಯ ರೂಪದಲ್ಲಿ ಅಲ್ಲದಿದ್ದರೂ ಹೆಚ್ಚು ವ್ಯವಸ್ಥಿತವಾಗಿ, ನೂರಾರು ಮಿಲಿಯನ್ ಗಂಡಸರು ಮತ್ತು ಹೆಂಗಸರನ್ನು ಅದು ತಟ್ಟುತ್ತಿದೆ.

ವಿಶ್ವ ಆಹಾರ ಸಮ್ಮೇಳನ ನಡೆದಾಗ ಜಗತ್ತಿನಲ್ಲಿ 450 ಮಿಲಿಯನ್ ಜನರು ಹಸಿವಿನ ಆಧುನಿಕರೂಪವಾದ ಪೌಷ್ಟಿಕಾಂಶದ ಕೊರತೆಯಿಂದ ನರಳುತ್ತಿದ್ದಾರೆಂದು ಅಂದಾಜು ಮಾಡಿತ್ತು.

ಬೇಸಾಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಬೇಕಾದಷ್ಟು ತಾಂತ್ರಿಕ ಸಾಧನೆಗಳು ಆಗಿವೆ. ಹಸಿರು ಕ್ರಾಂತಿ ಭರವಸೆಯನ್ನು ತಂದಿತ್ತು. ಹೊಸಬೆಳೆ ಮಾದರಿಗಳು, ಹೆಚ್ಚು ಪರಿಣಾಮಕಾರಿ ಕೀಟನಾಶಕಗಳು, ಫಲವತ್ತಿಕೆಯ ವೈಜ್ಞಾನಿಕ ಕ್ರಮಗಳು, ನೀರಾವರಿಯ ಹೊಸ ಕ್ರಮಗಳು ಇವೆಲ್ಲ ಬಂದಿವೆ. ಆದರೆ ಹಸಿವು ಇನ್ನೂ ಉಳಿದಿದೆ. ಏಕೆಂದರೆ ಹಸಿವು, ಬಡತನದ ಒಂದು ಅಂಗ. ಅನಭಿವೃದ್ಧಿ ಸ್ಥಿತಿಯಲ್ಲಿ ಬಡತನ ಮತ್ತು ಹಸಿವುಗಳು ಕೈಕೈ ಹಿಡಿದು ಸಾಗುತ್ತವೆ ಎಂಬುದನ್ನು ನಾನಿಲ್ಲಿ ಹೇಳಬೇಕು.

ಹೀಗಾಗಿ ಪ್ರತಿ ಬಾರಿ ನಾವು ಆಹಾರ ಮತ್ತು ಕೃಷಿಯ ವಿಶ್ವ ಸಮಸ್ಯೆಗಳ ಬಗ್ಗೆ ವಿಶ್ಲೇಷಿಸಲು ಸಂಧಿಸಿದಾಗಲೂ ಅನಿವಾರ್ಯವಾದ ಮತ್ತು ಭಾರವಾದ ಅಭಿವೃದ್ಧಿಯ ಪ್ರಶ್ನೆ ಎದ್ದೇ ಏಳುತ್ತದೆ. ಲ್ಯಾಟಿನ್ ಅಮೆರಿಕಾ ಈ ಚಾರಿತ್ರಿಕ ಬಂಧಕ್ಕೆ ಅಪವಾದವಲ್ಲ. ಅದರ ಗ್ರಾಮೀಣ ಜನತೆಯ ಶೇ.40ರಷ್ಟು ಭಾಗ ಬಡತನದಲ್ಲಿದೆಯೆಂದು ವಿಶ್ವ ಬ್ಯಾಂಕ್ ಅಂದಾಜು ಮಾಡಿತ್ತು. ಲ್ಯಾಟಿನ್ ಅಮೆರಿಕದ ಅಸ್ಥಿರ ನಗರ ಆರ್ಥಿಕತೆಯಿಂದ, ಗ್ರಾಮೀಣ ನಿರುದ್ಯೋಗದ ದೊಡ್ಡ ದುರಂತವನ್ನು ತಪ್ಪಿಸಲಾಗಿಲ್ಲ.

ವಿನಾಶದ ಅಂಚಿನಲ್ಲಿ

ಕೃಷಿ ಹಿಂದುಳಿದಿರುವಿಕೆ ಮಾತ್ರ ಬಡತನ ತರುವುದಿಲ್ಲ ಅಪೌಷ್ಟಿಕಾಂಶದ ಪರಿಧಿಯೊಳಗೇ ನಿಲ್ಲಲು ನಮ್ಮಂಥ ದೇಶಗಳು, ಬೇರೆ ದೇಶಗಳಿಂದ ಅಪಾರ ಆಹಾರವನ್ನು ಆಮದು ಮಾಡಿಕೊಳ್ಳಬೇಕಾಗುತ್ತದೆ. ಇದರಿಂದ ಹಣಪಾವತಿಯಲ್ಲಿ ಅಸಮಾನತೆ ತಲೆದೋರಿ ಈ ದೇಶಗಳು ವಿನಾಶದ ಅಂಚಿನಲ್ಲಿ ಬಂದು ನಿಲ್ಲುತ್ತವೆ.

ಹೆಚ್ಚುತ್ತಿರುವ ಜನಸಂಖ್ಯೆ

ಪ್ರತಿ ಐದು ದಿನಗಳಲ್ಲಿ ಜಗತ್ತಿನ ಜನಸಂಖ್ಯೆಯಲ್ಲಿ ಒಂದು ಮಿಲಿಯನ್ ಹೆಚ್ಚಾಗುತ್ತದೆ. ಇದರಲ್ಲಿ ಶೇ 90ರಷ್ಟು ಭಾಗ ಅನಭಿವೃದ್ಧಿ ದೇಶಗಳಲ್ಲಿ ಆಹಾರ ಉತ್ಪಾದನೆ ಕಡಿಮೆ ಇರುವ ದೇಶಗಳಲ್ಲಿ ಈಗ ಈ ಜಗತ್ತಿನ ಜನಸಂಖ್ಯೆ 4300 ಮಿಲಿಯನ್ ಮುಟ್ಟಿದೆ. ಮುಂದಿನ 20 ವರ್ಷಗಳಲ್ಲಿ ಇದು 6400 ಮಿಲಿಯನ್ ಆಗುತ್ತದೆ, ಇದರ ಶೇ 80ರ ಭಾಗ ಎಂದರೆ 5000 ಮಿಲಿಯನ್ ಜನ ಮೂರನೇ ಜಗತ್ತಿನಲ್ಲಿ ವಾಸಿಸುತ್ತಾರೆ.

ಅನಭಿವೃದ್ಧಿ ದೇಶಗಳ ಮಕ್ಕಳಲ್ಲಿ ಪ್ರತಿವರ್ಷವೂ 25 ಮಿಲಿಯನ್ ಮಕ್ಕಳು ತಮ್ಮ ಐದನೇ ಹುಟ್ಟುಹಬ್ಬಕ್ಕೆ ಮುಂಚೆ ಸಾಯುತ್ತಾರೆ. ಅನಭಿವೃದ್ಧಿ ದೇಶಗಳಲ್ಲಿನ ಎಲ್ಲ ಪ್ರವೃತ್ತಿಗಳೂ ಇಳಿಜಾರಿನಲ್ಲಿದೆ.



ಜಗತ್ತಿನ ಜನಸಂಖ್ಯೆಯ ನಾಲ್ಕನೇ ಭಾಗದಷ್ಟು ಜನ ಮಾತ್ರ ಕೈಗಾರಿಕೀಕರಣದ ದೇಶಗಳಲ್ಲಿ ಇದ್ದರೂ, ಜಗತ್ತಿನ ಖನಿಜದ $\frac{3}{4}$ ನೇ ಭಾಗದಷ್ಟನ್ನು ಅವರು ಬಳಸಿಕೊಳ್ಳುತ್ತಾರೆ. ವಿದ್ಯುತ್ ಬಳಕೆಯೂ ಅವರದೇ ಹೆಚ್ಚು.

ತೈಲ ಮತ್ತು ಅನಿಲದ ಬೆಲೆ ಹೆಚ್ಚುತ್ತಿರುವುದರಿಂದ ರಾಸಾಯನಿಕ ಮತ್ತು ಕೀಟನಾಶಕಗಳ ಬೆಲೆಯೂ ಹೆಚ್ಚುತ್ತದೆ. ತೈಲ ಉತ್ಪಾದಿಸದ ಅನಭಿವೃದ್ಧಿ ದೇಶಗಳಿಗೆ ಇದರಿಂದ ಇನ್ನಷ್ಟು ಕಷ್ಟಗಳು ಬರುತ್ತದೆ. ಆಹಾರದ ಬೆಲೆಗಳು ಮುಂದಿನ 20 ವರ್ಷಗಳಲ್ಲಿ ಎರಡರಷ್ಟಾಗುತ್ತದೆ.

ಭೂಮಿಯ ಫಲವತ್ತಿಕೆ ಹೆಚ್ಚಾದಿಲ್ಲದಿರುವುದರಿಂದ ಸಾಂಪ್ರದಾಯಿಕ ಗೊಬ್ಬರ ಮುಂತಾದುವನ್ನು ಇಂಧನ ತಯಾರಿಸಲು ಬಳಸುವಂತಿಲ್ಲ.

ನಾಚಿಕೆ ತರುವ ಅಂತರ

ಅಭಿವೃದ್ಧಿ ಪಡೆದ ಮತ್ತು ಅನಭಿವೃದ್ಧಿ ದೇಶಗಳ ನಡುವೆ ಇರುವ ಅಂತರ ನಾಚಿಕೆ ತರುವಷ್ಟಿದೆ. ವರ್ಷ ವರ್ಷಕ್ಕೆ ಅದು ಹೆಚ್ಚುತ್ತದೆ. ಈ ವಾಸ್ತವವನ್ನು ಗಮನಿಸಿ ನಾವು ಹೋರಾಡಲು ಇನ್ನಷ್ಟು ದೃಢ ನಿರ್ಧಾರ ಕೈಗೊಳ್ಳಬೇಕು.

ನಮ್ಮಲ್ಲಿನ ಪ್ರತಿಯೊಂದು ದೇಶಕ್ಕೂ ಕೃಷಿ ಸುಧಾರಣೆ ತುಂಬ ಅವಶ್ಯಕ. ಸಾಮಾಜಿಕ ನ್ಯಾಯವಿಲ್ಲದೆ ಹಸಿವು ಮತ್ತು ಬಡತನವನ್ನು ಹೋರಾಡಿ ಗೆಲ್ಲುವುದು ಸಾಧ್ಯವಿಲ್ಲ. ಸಣ್ಣ ಹಿಡುವಳಿಗಳು ಮತ್ತು ಚಿಕ್ಕ ಬೇಸಾಯ ತುಂಬಾ ಅನುತ್ಪಾದನೀಯ. ಸಾಮಾಜಿಕವಾಗಿ ನ್ಯಾಯಬದ್ಧವಾದ ಮತ್ತು ಸಮರ್ಥ ಉತ್ಪಾದನೆ ಮತ್ತು ವಿತರಣೆ ವಿಧಾನಗಳುಳ್ಳ ದೊಡ್ಡ ಹಿಡುವಳಿ ಈಗ ಅಗತ್ಯವಾಗಿದೆ.

ಕೃಷಿ ಸುಧಾರಣೆ ಕೇವಲ ಒಂದು ಹೆಜ್ಜೆ ಎಂಬುದನ್ನು ಅನುಭವ ತೋರಿಸಿಕೊಟ್ಟಿದೆ. ಯಾಂತ್ರೀಕರಣ ಮತ್ತು ರಾಸಾಯನಿಕಗಳಿಲ್ಲದೆ ಕೃಷಿ ಉತ್ಪಾದನೆ ಹೆಚ್ಚುವುದಿಲ್ಲ.

ಅಭಿವೃದ್ಧಿಯ ಸಮಸ್ಯೆ

ಸಾಮಾನ್ಯ ಬೆಳವಣಿಗೆ ಸಮಸ್ಯೆಯಾಗಿ ಬೇಸಾಯ ಕಾಣುವುದು ಇಲ್ಲಿಯೇ. ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ದಾರಿಯಲ್ಲಿ ನಾವು ಎದುರಿಸುವ ಪ್ರಶ್ನೆಗಳಿಗೆ ಉತ್ತರಿಸಬೇಕಾದ ತುರ್ತು ಇಲ್ಲಿದೆ.

ಕಳೆದ ವರ್ಷ, ಅಲಿಪ್ತ ಚಳುವಳಿ ದೇಶಗಳ ಪರವಾಗಿ ನಾನು ವಿಶ್ವಸಂಸ್ಥೆಯಲ್ಲಿ ಮಾತನಾಡಿದಾಗ, ಬೆಳವಣಿಗೆಯ ಸಮಸ್ಯೆಗಳನ್ನು ಅದರಲ್ಲೂ ಕೃಷಿಯನ್ನು ಕುರಿತು ಪ್ರಸ್ತಾಪಿಸಿದ್ದೆ. ಈಗ ಬೆಳೆಯುತ್ತಿರುವ ದೇಶಗಳು ಕೃಷಿಗೆ ಹೆಚ್ಚು ಬಂಡವಾಳ ಹೂಡಬೇಕಾಗಿದೆ. ಮಾನವ ಜನಾಂಗವನ್ನು ಎದುರಿಸುವ ಭೀಕರ ಸಮಸ್ಯೆ ಇದು. ದೊಡ್ಡ ಸಮಸ್ಯೆಯಾದ ಶಾಂತಿಗೆ ಇದು ಸಂಬಂಧಪಟ್ಟಿದೆ. ಅಭಿವೃದ್ಧಿ ಇಲ್ಲದಿದ್ದರೆ ಶಾಂತಿ ಇಲ್ಲ.

ಅಸಮಾನ ವ್ಯಾಪಾರದ ಸಮಸ್ಯೆಗಳು ಇಲ್ಲವಾದರೆ, ಕೈಗಾರಿಕೀಕರಣಕ್ಕೊಳಗಾದ ದೇಶಗಳಿಗೆ ಬೆಳೆಯುತ್ತಿರುವ ದೇಶಗಳು ಸರಬರಾಜು ಮಾಡುತ್ತಿರುವ ಕೃಷಿಉತ್ಪನ್ನಗಳು ಮತ್ತು ಕಚ್ಚಾ ವಸ್ತುಗಳಿಗೆ ಒಳ್ಳೆಯ ಬೆಲೆ ಕೊಟ್ಟರೆ, ನಮ್ಮಂಥ ದೇಶಗಳ ಬೆಳವಣಿಗೆಗೆ ಎಷ್ಟೋ ಸಹಾಯವಾಗುತ್ತದೆ.

ಮಿಲಿಟರಿ ವೆಚ್ಚ

ಮಿಲಿಟರಿಗಾಗಿ ಹಾಕುತ್ತಿರುವ 300,000 ಡಾಲರುಗಳಲ್ಲಿ 600,000 ಶಾಲೆಗಳನ್ನು ನಿರ್ಮಿಸಬಹುದು, 300 ಮಿಲಿಯನ್ ಜನರಿಗೆ 60 ಮಿಲಿಯನ್ ಸುಖದ ಮನೆ ಒದಗಿಸಬಹುದು. ಅಥವಾ 18 ಮಿಲಿಯನ್ ಹಾಸಿಗೆಗಳುಳ್ಳ 30,000 ಆಸ್ಪತ್ರೆಗಳನ್ನು ಕಟ್ಟಬಹುದು, ಅಥವಾ 20,000 ಫ್ಯಾಕ್ಟರಿಗಳನ್ನು ಕಟ್ಟಬಹುದು. ಅದರಲ್ಲಿ 20 ಮಿಲಿಯನ್ ಕೆಲಸಗಾರರಿಗೆ ಉದ್ಯೋಗ ಕೊಡಬಹುದು, 150 ಮಿಲಿಯನ್ ಹೆಕ್ಟೇರುಗಳಿಗೆ ನೀರಾವರಿ ವ್ಯವಸ್ಥೆ ನಿರ್ಮಿಸಬಹುದು.

●

ಪ್ಲೀನಮ್ ಯಶಸ್ವಿಗೊಳಿಸಲು ಪಕ್ಷದ ಕಾರ್ಯಕರ್ತರಿಗೆ ಕರೆ


ರಾಷ್ಟ್ರದಾದ್ಯಂತ ಒಂದು ಎಡ ಪ್ರಜಾಪ್ರಭುತ್ವ ಬದಲಿಯನ್ನು ಬೆಳೆಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಮುಂದಾಗಿದೆ. ಈ ದಿಸೆಯಲ್ಲಿ ಸಾಕಷ್ಟು ಪ್ರಯತ್ನಗಳು ನಡೆಯುತ್ತಲಿವೆ. ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ರಾಜ್ಯಗಳು ಈ ದಿಸೆಯಲ್ಲಿ ಮಾರ್ಗದರ್ಶನವೀಯುತ್ತಿವೆ. ಬದಲಿ ಬೆಳೆಸುವ ಮೊದಲ ಹಂತವಾಗಿ ಜಂಟೀ ಹೋರಾಟಗಳನ್ನು ನಡೆಸಬೇಕಾಗಿದೆ. ಆದರೆ ಇದು ಯಶಸ್ವಿಯಾಗಬೇಕಾದರೆ ನಮ್ಮ ಪಕ್ಷದ ಸಂಘಟನೆ, ಸಾಮೂಹಿಕ ಸಂಘಟನೆಗಳು ಬಲಿಷ್ಠವಾಗಿ ಬೆಳೆದು, ಜನತೆಯ ಹೋರಾಟಗಳನ್ನು ಬೆಳೆಸಲು ಮುತುವರ್ಜಿವಹಿಸಬೇಕು. ನಮ್ಮ ಮೇಲಿರುವ ಚಾರಿತ್ರಿಕ ಕರ್ತವ್ಯವನ್ನು ಈಡೇರಿಸುವುದರಲ್ಲಿ ಯಶಸ್ವಿಗೊಳಿಸಬೇಕಾದರೆ, ನಮ್ಮಲ್ಲಿರುವ ನಿಶ್ಶಕ್ತಿಯನ್ನು ಹೋಗಲಾಡಿಸಿ, ಪಕ್ಷವು ಸರಿಯಾಗಿ ಮತ್ತು ಹೊಸರೀತಿಯಿಂದ ಕೆಲಸ ಮಾಡಬೇಕು.

ಪಕ್ಷದ ಕೆಲಸಕಾರ್ಯಗಳನ್ನು ಉತ್ತಮಪಡಿಸುವ ದೃಷ್ಟಿಯಿಂದಲೇ ಡಿಸೆಂಬರ್ 24ರಿಂದ 28ರ ತನಕ ಮೈಸೂರಿನಲ್ಲಿ ರಾಜ್ಯ ಮಟ್ಟದ ಪ್ಲೀನಮ್ ನಡೆಸಲು ರಾಜ್ಯಸಮಿತಿಯು ನಿರ್ಣಯಿಸಿದೆ. ಪಕ್ಷದ ಪ್ರಧಾನ ಕಾರ್ಯದರ್ಶಿ ಮತ್ತು ಇತರ ಮುಖಂಡರುಗಳು ಭಾಗವಹಿಸಲಿರುವ ಈ ಪ್ಲೀನಮ್ ಯಶಸ್ವಿಯಾಗುವಂತೆ ಮಾಡಲು ಮುಂದಾಗಲು ಮೈಸೂರಿನ ಪಕ್ಷದ ಸದಸ್ಯರು ಮತ್ತು ಹಿತೈಷಿಗಳ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಕರೆಇತ್ತರು ಕಾಂ. ಎಂ. ಕೆ. ಭಟ್. ನವೆಂಬರ್ ಒಂದರಂದು ಮೈಸೂರು ಪಾರ್ಟಿ ಆಫೀಸಿನಲ್ಲಿ ಸೇರಿದ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ನವೆಂಬರ್ 21ರಂದು ಲೇಬರ್ ಕಛೇರಿಗಳೆದುರು ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲು ಸಿ.ಐ.ಟಿ.ಯು. ರಾಜ್ಯಸಮಿತಿ ಮಾಡಿದ ತೀರ್ಮಾನವನ್ನು ಜಾರಿಗೊಳಿಸಲು ಸಿ.ಐ.ಟಿ.ಯು. ರಾಜ್ಯಸಮಿತಿ ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪ ಕರೆ ಇತ್ತರು.

ಪ್ಲೀನಮ್ ತಯಾರಿ ನಡೆಸುವುದಕ್ಕಾಗಿ ಕಾಂ. ಎಂ. ಎನ್ ಉಗ್ರಪ್ಪನವರು ಅಧ್ಯಕ್ಷರಾಗಿಯೂ, ಕಾಂ. ತಿಮ್ಮೇಗೌಡರು ಖಜಾಂಚಿಯಾಗಿ ಇರುವ ಹದಿನೇಳು ಮಂದಿಯ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ.

●

Scheduled Caste and Tribal Folks are partners of People's victorious march







The Left Front Government firmly believes that the poor and the exploited have no class divisions. The poor will establish their legitimate rights through just struggles. This popular Government firmly believes in this truth.

This Government is pledged to Democracy and Democratic movements of the poor and the exploited people of this State. The Scheduled Caste and Tribal Folks form a very large segment of its population. The last three years' rule of the Left Front Government has been a bright and unparalleled record of establishing democracy and of the successful struggle of the toiling masses for the establishment of their legitimate rights.

The establishment of the Panchayat Raj is the first achievement of this great struggle. For the first time the exploited and tortured rural people elected their own representatives for the administrative responsibilites of their own villages. The vested interests have been hard hit with the election of the three-tier Panchayats. The Panchayats are vowed to bring about a progressive change in the socio-economic structure of the

Defeat Separatist and Secessionist forces

rural areas. The main beneficiaries of this change are the poorest of rural folks, the agricultural labourers, bargadars, small peasantry, etc. Most of them belong to the Scheduled Castes and Tribes. The past three years of the Left Front Government rule have fulfilled most of their legitimate demands. The road to many economic developments is now wide open.

With the land reform measures of the Left Front Government 6,15,504 acres of vested land have been distributed among 9,75,000 landless poor. The number of Scheduled Castes and Tribals among the recipients are 5,49,300.

In the 'Operation Barga' movement, initiated to protect the rights of the Bargadars and to ensure their fair share of crops, 8,55,000 names were officially recorded, out of those the number of Scheduled Castes and Tribals is 4,64,000.

59,000 Bargadars have received bank loans at a nominal interest from the banks, through the initiative of the Left Front Government, more than half of the recipients belong to the Schedule Castes and Tribes. Forty five lakhs peasants with less than fifty thousand rupees worth of property were exempted from agricultural tax. Most of the beneficiaries belong to the Scheduled Castes and Tribes.

Last year in the "Food for work" and other developmental works, 17 lakhs quintals of wheat were distributed and Rs. 11,32,00,000/- were spent. Out of which 12 lakh quintals of wheat and nearly Rs. 8 crores reached the homes of poor people belonging to the Scheduled Castes and Tribes.

In India for the first time the Left Front Government introduced the Unemployment Assistance Scheme of Rupees 50 per month for 2.5 lakhs of unemployed youth, old age pension of Rs. 60 per month for poor peasants over sixty years of age. The poor Scheduled Caste and Tribals people were largely benefited with these measures, more than 10,000 people are getting old age pension.

Before the inception of the Left Front Government the State allocated Rs. 5,66,00,000/- for the Scheduled Caste and Tribal Welfare Department. The Left Front Government during the last three years increased this allocation to Rs. 13,48,00,000/-

Under the aegis of the Left Front Government and the initiative of the Scheduled Castes and Tribal Welfare Department the lives of the people of the Scheduled Castes and Tribes promises a bright future. The gates of education and culture is wide open.

following schemes have been taken up : Supply of Drinking Water, special arrangements for medical treatment in hospitals, dwelling houses grant of Rs. 1,500 per family and a Rs. 250 grant to save them from the exploitation of the moneylenders etc. Special training is being given by the Welfare Department at 62 centres in weaving, leather, wood, silk, knitting, lac, handicrafts etc. Each trainee is being given a stipend of Rs. 75 during the training period and after completion of the training, a maximum of Rs. 500 monetary help to make a start in his life. Co-operative societies are offering many more incentives.

Many schemes have been taken in the development programme to make sure the earning capabilities of the Tribal viz. Development of Pasture Land, Water Preservation, Composite and Small Forest Produce Cultivation, Silk and Lac Cultivation, Forest Development, Forest Preservation and legal acceptance of their long standing rights on Forest Produce.

The Welfare Department have taken many bold steps to ensure that the poorer sections of the underdeveloped people avail of full opportunities of education. The schemes include Free distribution of books and other materials to students including uniform; special stipend for regular attendance in school; opening of new schools; stipend to encourage the guardians, establishment of more hostels, and stipend for students boarders; establishment of central hostel at Calcutta for students pursuing higher education; printing of Santhali books in 'Alchiki' characters. Acceptance of Nepalese language and steps for its official use and establishment of an 'Academy' for the development of Nepalese culture.

Under severe limitations, the Left Front Government is giving effect to these schemes only for the establishment of the legitimate rights of the underdeveloped communities. And these are being effected with the successful implementation of the planned programmes, with the active and constructive participation of the Panchayats and the united efforts of poor people.

The reactionary clique of the vested interests are scared; they want to create disunity in this united force posing themselves as champions of the Scheduled Caste and Tribal cause. They want to create a poisonous atmosphere in the democratic movement with separatist and secessionist slogans. But the exploited proletariat today are an invincible force of a victorious march. That onward march is for the establishment of legitimate rights, of socio-economic independence. It is aimed towards a bright future for Education and Culture. Unswerving.

Government of West Bengal

BEEVAS/ICA/5/80

ಲಂಕೇಶ್ ಮೇಲೆ ದಾಳಿ : ಪ್ರತಿಭಟನೆ

ನವೆಂಬರ್ ಎರಡರಂದು ನಗರದ ತಮಿಳು ಸಂಸ್ಥೆಯೊಂದು ಏರ್ಪಡಿಸಿದ್ದ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಖ್ಯಾತ ಬರಹಗಾರ, ಪತ್ರಕರ್ತ ಶ್ರೀಯುತ ಲಂಕೇಶರು ಕನ್ನಡನಾಡು, ನುಡಿ ರಕ್ಷಕ (?) ರಿಂದ ದಾಳಿಗೊಳಗಾದಿದ್ದಾರೆಂದು ವರದಿಯಾಗಿದೆ.

ತಮ್ಮ ಇತ್ತೀಚಿನ ಸಂಚಿಕೆಯಲ್ಲಿ ಲಂಕೇಶರು ರಾಯಲ ಚೇಲಾ ವಾಟಾಳ್‌ರನ್ನು ಬಯಲಿಗೆಳೆದಿದ್ದುದರಿಂದ ಈ ಶಿಕ್ಷೆಗೊಳಪಡಬೇಕಾಗಿ ಬಂದುದು ರಾಜ್ಯದ ರಾಜಕೀಯ ಸಾಗುತ್ತಿರುವ ಮಾರ್ಗದ ಸ್ಪಷ್ಟ ನಿದರ್ಶನ.

ಕೆಲವು ದಿನಗಳ ಹಿಂದೆ ಕಾಂಗ್ರೆಸ್ ಗೂಂಡಾಗಳು ನಗರದ ಪತ್ರಿಕಾ ಕಾರ್ಯಾಲಯಗಳ ಮೇಲಿನ ದಿಗ್ಬಂಧನದ, ಪೋಲೀಸರ ಅಸಹ್ಯ ವರ್ತನೆಯು ಇನ್ನೂ ಮಾಸಿಲ್ಲ. ಸುಭದ್ರ ಮತ್ತು ಕಾರ್ಯತತ್ಪರ ಸರಕಾರದ ಆಶ್ವಾಸನೆಯೊಂದಿಗೆ ಅಧಿಕಾರಕ್ಕೆ ಬಂದ ಮಹಾತಾಯಿಯ ಆಳ್ವಿಕೆಯ ಆರಂಭದಿಂದಲೇ ದೇಶಾದ್ಯಂತ ಈ ತರಹದ ಘಟನೆಗಳು ನಡೆದಿದ್ದು, ಪತ್ರಕರ್ತರನ್ನು ಬೆದರಿಸಿ, ಹೆದರಿಸಿ ಕೊನೆಗೆ ಥಳಿಸಿಯಾದರೂ ಬಾಯ್ಮುಚ್ಚಿಸಲೆತ್ನಿಸುವ ಪ್ರಯತ್ನಗಳು ನಡೆದಿವೆ

ವಾಟಾಳರ ನಿಜರೂಪ ಬೆಂಗಳೂರ ನಾಗರಿಕರಿಗೆ ಅರಿಯದ್ದಲ್ಲ. ಭಾಷೆಯನ್ನು ಬಂಡವಾಳವಾಗಿಟ್ಟುಕೊಂಡು ನಡೆಸುತ್ತಿರುವ ಚೇಷ್ಟೆಗಳನ್ನು ನಡೆಸುತ್ತಾ, ನೆರೆ ಪ್ರಾಂತದಿಂದ ಬಂದು ದುಡಿದು ಬದುಕುತ್ತಿರುವ ಶ್ರಮಜೀವಿಗಳ ಬಗ್ಗೆ ವಿಷಕಾರುತ್ತ ಬಂದಿದ್ದಾರೆ.

ಸ್ವಾತಂತ್ರ್ಯಪ್ರಿಯರನ್ನೂ, ಪ್ರಜಾಪ್ರಭುತ್ವವಾದಿಗಳನ್ನೂ ಕೆರಳಿಸಿದ ಲಂಕೇಶರ ಮೇಲಿನ ಹಲ್ಲೆಯನ್ನು ಪ್ರತಿಭಟಿಸಿ ನಾಡಿನಾದ್ಯಂತ ಪ್ರತಿಭಟನೆಗಳು ನಡೆಯುತ್ತಿವೆ. ಬೆಂಗಳೂರಲ್ಲೂ ಕಳೆದ 4ರಂದು ಸಿ. ಪಿ. ಐ., ಸಿ. ಪಿ. ಎಂ., ಸಮುದಾಯ, ಬಂಡಾಯ ಸಾಹಿತ್ಯ, ದಲಿತ ಸಂಘರ್ಷ ಸಮಿತಿಯವರಲ್ಲದೇ ಅನೇಕ ಬುದ್ಧಿಜೀವಿಗಳೂ, ಬರಹಗಾರರು, ಕಾರ್ಮಿಕ ಸಂಘಗಳು ಸೇರಿ ಸಾವಿರಾರು ಜನ ಪೋಲೀಸ ಕಮೀಷನರ ಕಛೇರಿಯ ಮುಂದೆ ರಾಜಭವನದ ಮುಂದೆ ಮತಪ್ರದರ್ಶನ ನಡೆಸಿ ಹಲ್ಲೆ ನಡೆಸಿದ ಗೂಂಡಾಗಳನ್ನು ಶಿಕ್ಷಿಸಬೇಕೆಂದು ಒತ್ತಾಯಿಸಿದರು.

ಲಂಕೇಶರ ಮೇಲಿನ ಹಲ್ಲೆ ಒಬ್ಬ ವ್ಯಕ್ತಿಯ ಮೇಲೆ ನಡೆದದ್ದಲ್ಲ. ದಿಟ್ಟ ಪತ್ರಕರ್ತರ ಮೇಲೆ, ಪತ್ರಿಕಾ ಸ್ವಾತಂತ್ರ್ಯದ ಮೇಲೆ ನಡೆದ ದಾಳಿ, ಕಾಂಗ್ರೆಸ್ ಆಳ್ವಿಕೆಯಲ್ಲಿ ಸಮಾಜದ್ರೋಹಿಗಳದೇ ಅಟ್ಟಹಾಸ ನಡೆಯುತ್ತಿದೆ. ಈ ದುಷ್ಕೃತ್ಯಗಳನ್ನು ದೃಢವಾಗಿ ಎದುರಿಸಿ ಪತ್ರಿಕಾ ಸ್ವಾತಂತ್ರ್ಯ ರಕ್ಷಿಸುವುದು ಎಲ್ಲ ಪ್ರಜಾಪ್ರಭುತ್ವವಾದಿಗಳ ಅದರಲ್ಲೂ ಎಡಪಕ್ಷಗಳ ಪ್ರಮುಖ ಕರ್ತವ್ಯವಾಗಿದೆ.

ಈ ಹಲ್ಲೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯ ಪರವಾಗಿ ಕಾಂ. ಎಸ್. ಎಲ್. ಉಪಾಧ್ಯಾಯ, ಸಿ. ಐ. ಟಿ. ಯು. ಬೆಂಗಳೂರ ಜಿಲ್ಲಾ ಸಮಿತಿಯ ಪರವಾಗಿ ಕಾಂ. ಅನಂತರಾಂ, ಎಸ್. ಎಫ್. ಐ. ಪರವಾಗಿ ಕಾಂ. ರೇಣುಕಾರಾಧ್ಯ, ಇವರಲ್ಲದೇ ಅನೇಕ ಕಾರ್ಮಿಕ ಸಂಘಗಳ ನಾಯಕರು ಉಗ್ರವಾದಿ ಖಂಡಿಸಿದ್ದಾರೆ. ●

ರೆಡ್‌ಡೇನ್ ಮತ್ತು ಮಿಶ್ರತಳಿ ಯೋಜನೆ

ಕಾರ್ಮಿಕರ ಹೋರಾಟ

ಬೆಂಗಳೂರ ಉತ್ತರ ತಾಲ್ಲೂಕದ ಹೇಸರಘಟ್ಟದ ಪರಿಸರದಲ್ಲಿ ಈ ಮೇಲ್ಕಂಡ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ. ಇದು ರಾಜ್ಯಸರಕಾರದ ಒಂದು ಯೋಜನೆಯಾಗಿದ್ದು ಇಲ್ಲಿ ಹಲವಾರು ಆಧುನಿಕ ಪಶು ಅಭಿವೃದ್ಧಿ ಸಂಶೋಧನೆಗಳನ್ನು ನಡೆಸುತ್ತಾ ದೇಶಕ್ಕಾಗಿ ಹಲವಾರು ಉತ್ತಮ ಮಿಶ್ರತಳಿಗಳನ್ನು ತಯಾರಿಸಲ್ಪಡುತ್ತದೆ. ಈ ಕಾರ್ಯದಲ್ಲಿ ಕೆಲಸಮಾಡುವ ಕೆಲಸಗಾರರ ದಿನಗೂಲಿ ಅತೀ ನಿಕೃಷ್ಟ ಅಂದರೆ 6ರೂ. 50 ಪೈಸೆ. ಅದೂ 12 ವರುಷಗಳ ದೀರ್ಘ ಹೋರಾಟದ ನಂತರ ದೊರೆತದ್ದು. ಸಿ. ಐ. ಟಿ. ಯು. ಅಡಿಯಲ್ಲಿ ಸಂಘಟಿತರಾದಿರುವ ಕಾರ್ಮಿಕರು ಪ್ರಾಥಮಿಕ ಸೌಲಭ್ಯ (ರಜೆ ಇತ್ಯಾದಿ), ವೇತನದಲ್ಲಿ ಹೆಚ್ಚಳ ಮುಂತಾದ ಬೇಡಿಕೆಗಳನ್ನು ಮುಂದಿಟ್ಟು ಆಡಳಿತ ವರ್ಗವನ್ನು ಒತ್ತಾಯಿಸುತ್ತಾ ಬಂದಿದ್ದಾರೆ. 13-3-80ರಂದು ಅಧಿಕಾರಿಗಳಿಗೆ ಬೇಡಿಕೆಗಳ ಬಗ್ಗೆ ಮನವಿ ಅರ್ಪಿಸಲಾಗಿತ್ತು. 3 ತಿಂಗಳ ಅವಧಿ ಕೇಳಿದ ಆಡಳಿತವರ್ಗ 8 ತಿಂಗಳು ಕಳೆದರೂ ಯಾವುದೇ ತೀರ್ಮಾನಕ್ಕೆ ಬರದೆ ನೆಪ ಹೇಳಿಕೊಂಡು ಬರುತ್ತಿದೆ. ಕಾರ್ಮಿಕ ಅಧಿಕಾರಿಗಳೆದುರು 4-5 ಸಲ ಸಂಧಾನ ನಡೆದಿದ್ದರೂ ವಿಫಲವಾಗಿದೆ.

13-10-80ರಂದು ಈ ಕೇಂದ್ರಕ್ಕೆ ಭೇಟಿ ನೀಡಿದ ಮಹಾನ್ ಮುಖ್ಯ ಮಂತ್ರಿ ಗುಂಡೂರಾಯರ ಅಮೃತ ಹಸ್ತ (?)ಕ್ಕೆ ಮನವಿ ಕೊಟ್ಟದ್ದರೂ ಫಲಕಾರಿಯಾಗಿಲ್ಲ. ಕಾರಣ ಅನಿವಾರ್ಯವಾಗಿ ಯೋಜನೆಯ ನಾನಾ ವಿಭಾಗಗಳಲ್ಲಿ ದಿನಗೂಲಿ ಮೇಲೆ ಕೆಲಸಮಾಡುತ್ತಿರುವ ಕೃಷಿಕೂಲಿಕಾರರು ಮುಷ್ಕರಕ್ಕೆ ಇಳಿದಿದ್ದಾರೆ.

7-11-80ರಿಂದ ಪ್ರಾರಂಭವಾದಿರುವ ಮುಷ್ಕರಕ್ಕೆ ಸಂಘಸಂಸ್ಥೆಗಳು ಬೆಂಬಲವೀಯಬೇಕೆಂದು ಸಂಘದ ಪದಾಧಿಕಾರಿಗಳು ವಿನಂತಿಸಿಕೊಂಡಿದ್ದಾರೆ.

●

ಕಾಂ. ಲ್ಯೂಗಿ ಲೋಂಗೋ ನಿಧನ

ಇಟಾಲಿಯನ್ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷರಾದ ಕಾಂ. ಲ್ಯೂಗಿ ಲೋಂಗೋ ಅವರು ದಿನಾಂಕ 16-10-80ರಂದು ರೋಂನಲ್ಲಿ ನಿಧನರಾದರು.

ಕಾಂ. ಲೋಂಗೋ ಇಟಾಲಿಯನ್ ಕಮ್ಯುನಿಸ್ಟ್ ಪಕ್ಷದ ಸ್ಥಾಪಕರಲ್ಲೊಬ್ಬರು. ಮುಸ್ಸೋಲಿನಿಯ ಫ್ಯಾಸಿಸ್ಟ್ ಆಡಳಿತದ ವಿರುದ್ಧ ನಡೆದ ವೀರೋಚಿತ ಹೋರಾಟದ ಮುಂಚೂಣಿಯಲ್ಲಿದ್ದ ಕಾಂ. ಲೋಂಗೋ ಸಮಾಜವಾದಿ ರಾಷ್ಟ್ರಗಳ ಬಳಗದ ಹೊರಗೆ ಇರುವ ವಿಶ್ವದ ಬಲಿಷ್ಠ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಕಾಂ. ತೊಗಲಿಯಾತ್ತಿ ನಿಧನದ ನಂತರ ಕಾಂ. ಲೋಂಗೋ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದು, 1972ರಿಂದ ತಮ್ಮ ಕೊನೆಗಳಿಗೆಯವರೆಗೆ ಇಟಾಲಿಯನ್ ಕಮ್ಯುನಿಸ್ಟ್ ಪಕ್ಷದ ಧುರೀಣರಾಗಿದ್ದರು. ಕಾಂ. ಲೋಂಗೋ ನಿಧನದಿಂದಾಗಿ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯು ಪ್ರಮುಖ ನೇತಾರನನ್ನು ಕಳೆದುಕೊಂಡಂತಾಗಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರಸಮಿತಿ ಕಾಂ. ಲ್ಯೂಗಿ ಲೋಂಗೋ ನಿಧನದ ನಿಮಿತ್ತ ತನ್ನ ತೀವ್ರ ಸಂತಾಪ ವ್ಯಕ್ತಪಡಿಸಿ, ಇಟಾಲಿಯನ್ ಕಮ್ಯುನಿಸ್ಟ್ ಪಕ್ಷಕ್ಕೂ ಹಾಗೂ ಅಗಲಿದ ಕಾಂ. ಲೋಂಗೋ ಕುಟುಂಬಕ್ಕೂ ಸಂದೇಶ ಕಳಿಸಿದೆ.

○

ಉಡುಪಿ ಯುವಜನ ಕೇಂದ್ರದ ಶೈಕ್ಷಣಿಕ ಶಿಬಿರ

ಉಡುಪಿ ನವೆಂಬರ್ 2: ಉಡುಪಿ ಯುವಜನ ಕೇಂದ್ರದ ಒಂದು ಶೈಕ್ಷಣಿಕ ಶಿಬಿರವು ಪಡುಬಿದ್ರೆಯಲ್ಲಿ ನವೆಂಬರ್ 1ನೇ ಮತ್ತು 2ನೇ ತಾರೀಖಿನಂದು ಜರಗಿತು. ತಾ. 1ರಂದು ಬೆಳಿಗ್ಗೆ ಉಡುಪಿ ಯುವಜನ ಕೇಂದ್ರದ ಹಿತೈಷಿಗಳಾದ ಶ್ರೀ ಪದ್ಮನಾಭ ಅವರು ಧ್ವಜಾರೋಹಣ ಮಾಡುವುದರೊಂದಿಗೆ ಶಿಬಿರವು ಪ್ರಾರಂಭವಾಯಿತು. ಶಿಬಿರದ ಅಧ್ಯಕ್ಷತೆಯನ್ನು ಉಡುಪಿ ಯುವಜನ ಕೇಂದ್ರದ ಅಧ್ಯಕ್ಷರಾದ ಸುಧಾಕರರಾವ್ ಅವರು ವಹಿಸಿದ್ದರು.

ಯುವಜನತೆಯ ಹೋರಾಟವು ಇಂದು ಹೊಸತೇನಲ್ಲವೆಂದೂ, ಪ್ರಪಂಚದಲ್ಲಿ, ನಮ್ಮ ದೇಶದಲ್ಲಿ ಹಾಗೂ ಕರ್ನಾಟಕದಲ್ಲಿ ಚರಿತ್ರೆಯ ಉದ್ದಕ್ಕೂ ಒಂದಲ್ಲಾ ಒಂದು ಅನ್ಯಾಯದ ವಿರುದ್ಧ ಯುವಜನತೆ ಸಂಘಟಿತರಾಗಿಯೋ, ಅಸಂಘಟಿತರಾಗಿಯೋ ಹೋರಾಡುತ್ತಾ ಬಂದಿದೆ. ಇಂದು ಸಮಾಜದಲ್ಲಿ ಅಸಮಾನತೆ, ಬಡತನ, ನಿರುದ್ಯೋಗ, ಮೂಢನಂಬಿಕೆ, ಜಾತೀಯತೆ ಇತ್ಯಾದಿ ಅನಿಷ್ಟಗಳು ತಾಂಡವವಾಡುತ್ತಿರುವಾಗ ಕೋಮುವಾದದಿಂದ ಹಿಂಸಾಕೃತ್ಯಗಳು ಹೆಚ್ಚುತ್ತಿರುವಾಗ ಯುವಜನತೆ ಈ ಸಮಸ್ಯೆಗಳ ಬಗ್ಗೆ ಸರಿಯಾದ ತಿಳುವಳಿಕೆಯೊಂದಿಗೆ ಸಂಘಟಿತರಾಗಿ ಹೋರಾಡುವುದು ಅಗತ್ಯವೆಂಬ ಅಭಿಪ್ರಾಯ ಶಿಬಿರದಲ್ಲಿ ಮೂಡಿಬಂತು.

ಮಾನವನ ವಿಕಾಸ, ಕುಟುಂಬ ಪದ್ಧತಿ ಹಾಗೂ ಸಮಾಜ ಪದ್ಧತಿಯ ವಿಕಾಸ, ಖಾಸಗಿ ಆಸ್ತಿ ಮತ್ತು ಪ್ರಭುತ್ವದ ಉದಯ, ಇತ್ಯಾದಿಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಲಾಯಿತು. ಮಾನವ ಸಮಾಜವು ದಾಸ್ಯಪದ್ಧತಿ, ಪಾಳೆಯಗಾರಿ ಪದ್ಧತಿ ಹಾಗೂ ಬಂಡವಾಳಶಾಹಿ ಪದ್ಧತಿಯನ್ನು ದಾಟಿ ಈಗ ಸಮಾಜವಾದಿ ಪದ್ಧತಿಯತ್ತ ಸಾಗುತ್ತಿದೆ ಎಂದು, ನಮ್ಮ ದೇಶದಲ್ಲಿಯೂ ಸಮಾಜವಾದಿ ಸಮಾಜ ಸ್ಥಾಪಿಸಲು ಜನರು ಸಂಘಟಿತರಾಗಬೇಕೆಂದು ಯುವಜನರು ಹೆಚ್ಚು ಆಸಕ್ತಿ ವಹಿಸಬೇಕೆಂದೂ ಅಭಿಪ್ರಾಯ ಪಡಲಾಯಿತು.

ಶಿಬಿರದಲ್ಲಿ ಉಡುಪಿ ತಾಲ್ಲೂಕಿನಾದ್ಯಂತ ಸುಮಾರು ಒಂದುನೂರು ಯುವಜನರು ಪಾಲ್ಗೊಂಡಿದ್ದರು. ತಾ. 1ರಂದು ರಾತ್ರಿ ಉಡುಪಿ ಸಮುದಾಯದವರಿಂದ 'ಕೆಲಸ ಖಾಲಿ ಇದೆ' ಮತ್ತು 'ಬೆಳೆದವರು' ಎಂಬ ರೂಪಕ ಮತ್ತು ಕಿರು ನಾಟಕಗಳನ್ನು ಆಡಿತೋರಿಸಲಾಯಿತು. ಕರ್ನಾಟಕ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯನ್ನು ರಾಜ್ಯಾದ್ಯಂತ ಬೆಳೆಸಿಕೊಂಡು ಬರಬೇಕೆಂದು ಕರೆ ನೀಡಲಾಯಿತು.

ವರದಿ : ಕೆ. ಲಕ್ಷ್ಮಣ

ಪ್ರತಿಭಟನಾ ಪ್ರದರ್ಶನ

ಕೃಷ್ಣರಾಜಪುರ ಪ್ರದೇಶದ ಟಿನ್ ಫ್ಯಾಕ್ಟರಿಯ ಹಿಂಬಾಗದಲ್ಲಿರುವ ಸಿ.ಐ.ಟಿ.ಯು. ಆಫೀಸಿನ ಮೇಲೆ ಸಮಾಜಘಾತುಕ ಶಕ್ತಿಗಳು ತಾರೀಖು 3-11-80ರಂದು ರಾತ್ರಿ ಸಿ. ಐ. ಟಿ. ಯು. ಬಾವುಟವನ್ನು ಕಿತ್ತು ಆಫೀಸಿನ ಮುಂದುಗಡೆ ಸುಟ್ಟುಹಾಕಿ – ಆಫೀಸ್ ಬೋರ್ಡನ್ನು ತೆಗೆದುಕೊಂಡು ಹೋಗಿರುವುದಲ್ಲದೇ ತಾ. 4-11-80 ರಂದು ಬೆಳಿಗ್ಗೆ 11 ಗಂಟೆಯ ಸಮಯದಲ್ಲಿ ಆಫೀಸ್ ಬಾಗಿಲನ್ನು ಒಡೆದು ಕಾಗದ ಪತ್ರಗಳನ್ನು ಎಸದಾಡಿ ಹೋಗಿದ್ದಾರೆ. ಈ ವಿಷಯವು ಸಿ ಐ ಟಿ.ಯು.ವಿನ ಸಂಘಗಳಿಗೆ ತಿಳಿದು ಕಾರ್ಮಿಕರು ಸಂಜೆ 4 ಗಂಟೆಯಿಂದ 6 ಗಂಟೆಯವರೆಗೂ ಮೆರವಣಿಗೆಯಲ್ಲಿ ಸಿ ಐ ಟಿ. ಯು. ಆಫೀಸಿಗೆ ಬಂದು ಹಲ್ಲೆಯ ವಿರುದ್ಧ ಘೋಷಣೆಗಳನ್ನು ಕೂಗಿ ಈ ಅಕೃತ್ಯ ಎಸಗಿದವರಿಗೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಈ ಕಾರ್ಮಿಕರನ್ನು ಉದ್ದೇಶಿಸಿ ರಾಜ್ಯದ ಸಿ ಐ ಟಿ ಯು. ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್ ಮತ್ತು ಜಿಲ್ಲಾ ಸಿ. ಐ. ಟಿ. ಯು. ಉಪಾಧ್ಯಕ್ಷ ಕಾಂ. ನಾರಾಯಣರಾವ್ ಬಾನು ಅವರು ಈ ಹಲ್ಲೆಯ ಉದ್ದೇಶ ಖಂಡಿಸಿ ಮಾತನಾಡಿದರು. "ದೇಶದ ಆರ್ಥಿಕ ಬಿಕ್ಕಟ್ಟು ಜಾಸ್ತಿಯಾಗಿ, ರಾಜಕೀಯ ಬಿಕ್ಕಟ್ಟಿನಿಂದ ಆಳುವ ಪಕ್ಷವು ಜನಸಾಮಾನ್ಯರ ಪ್ರಶ್ನೆಗಳನ್ನು ಬಗೆಹರಿಸುವಲ್ಲಿ ವಿಫಲವಾಗಿ, ಜನತೆಯ ಹೋರಾಟಗಳು ಬರುವಾಗ ಈ ಸಮಾಜಘಾತುಕ ಶಕ್ತಿಗಳನ್ನು ಉಪಯೋಗಿಸಿ ದುಡಿಯುವ ವರ್ಗದ ಸಂಘಟನೆ ಮುರಿಯಲು ಪ್ರಯತ್ನಿಸುತ್ತಿದೆ. 1971 ರಿಂದ 1977ರವರೆಗೂ ಪಶ್ಚಿಮ ಬಂಗಾಳದಲ್ಲಿ ಸಿ.ಐ.ಟಿ.ಯು. ಮೇಲೆ ನಡೆಸಿದ ದಾಳಿ, ದೌರ್ಜನ್ಯಗಳನ್ನು ತಿಳಿಸಿ, ರಾಜ್ಯದಲ್ಲಿ ನಡೆಯುತ್ತಿರುವ ರೈತರ ಚಳುವಳಿ, ಕಾರ್ಮಿಕರ ಹೋರಾಟ, ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆಗಳ ಹೋರಾಟಗಳಿಗೆ ಈ ಶಕ್ತಿಗಳು ಬೆಂಬಲಕೊಡುವ ಬದಲು ಈ ಹೋರಾಟಗಳನ್ನು ಮುರಿಯಲು ಮತ್ತು ಕಾರ್ಮಿಕ ವರ್ಗದ ಸಂಘಟನೆಯನ್ನು ಒಡೆಯಲು ಈ ಶಕ್ತಿಗಳಿಂದ ಸಾಧ್ಯವಿಲ್ಲವೆಂದು ಕೆಂಪು ಬಾವುಟದ ಪರಂಪರೆಯನ್ನು ತಿಳಿಸಿ ಈ ದಿಸೆಯಲ್ಲಿ ಕಾರ್ಮಿಕ ವರ್ಗವು ಐಕ್ಯತೆಯಿಂದ ಇದ್ದರೆ ಮಾತ್ರ ತನ್ನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಾಧ್ಯವೆಂದು ತಿಳಿಸಿದರು".

○

ದೇಶವ್ಯಾಪೀ ಚರ್ಚೆ ಬೇಕು - ಆದರೆ ಯಾವುದರ ಬಗ್ಗೆ?

[1ನೇ ಪುಟದಿಂದ]

ವಿಚಾರವಿನಿಮಯ ನಡೆಯಬೇಕಾಗಿದೆ. (ಇದರಿಂದ ಅವರ ನಡುವಿನ ವೈಚಾರಿಕ ಮತಭೇದ ಅಳಿಸಿಹೋಗಬಹುದೆಂದೇನಲ್ಲ. ಆಡಳಿತ ಪಕ್ಷ ಹಾಗೂ ಎಡ ಮತ್ತು ಪ್ರಜಾಪ್ರಭುತ್ವವಾದೀ ವಿರೋಧಪಕ್ಷಗಳು ಬೇರೆ ಬೇರೆ ವರ್ಗ ಆಸಕ್ತಿಗಳನ್ನು ಪ್ರತಿನಿಧಿಸುತ್ತಿರುವುದರಿಂದ ಈ ರೀತಿ ಆಗುವುದೆಂದು ನಿರೀಕ್ಷಿಸಲೂ ಸಾಧ್ಯವಿಲ್ಲ. ಆದರೆ ವಿಚಾರ ಭೇದಗಳು ಇಲ್ಲಿ ಸ್ಪಷ್ಟವಾಗುವುದರಿಂದ ಜನತೆಗೆ ಒಳ್ಳೆಯದಾಗುತ್ತದೆ. ಯಾಕೆಂದರೆ ಅಂತಿಮವಾಗಿ ಅದನ್ನು ಪರಿಹರಿಸುವವರು ಜನತೆಯೇ.)

ಪ್ರಧಾನಮಂತ್ರಿ ಹಾಗೂ ಅವರ ಪಕ್ಷ ಇಷ್ಟೊಂದು ಮುಖ್ಯಪ್ರಶ್ನೆಗಳ ಬಗ್ಗೆ ಚರ್ಚೆ ನಡೆಸಲು ಯಾಕೆ ಹಿಂಜರಿಯುತ್ತಿದ್ದಾರೆ?

ಇಂತಹದೊಂದು ಚರ್ಚೆಯ ಅವಶ್ಯಕತೆಯನ್ನು ವಕೀಲರ ಸಮ್ಮೇಳನದ ಸಂಘಟಕರೂ, ಪ್ರಧಾನ ಮಂತ್ರಿಯವರೂ ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ. ಯಾಕೆಂದರೆ ರಾಜಕೀಯ ವ್ಯವಸ್ಥೆಯಲ್ಲಿ ಬದಲಾವಣೆ ಬಗ್ಗೆ ಕೇಳುವಾಗ ಅವರು ಸದ್ಯದ ರಾಜಕೀಯ ವ್ಯವಸ್ಥೆ ಸೋತಿದೆ ಎಂಬುದನ್ನು ಒಪ್ಪಿಕೊಂಡಂತಾಗಿದೆ. ಹಾಗಿದ್ದರೆ ಈ ಸೋಲಿಗೆ ಕಾರಣವೇನು?

ಇದು ಕೇವಲ ಕಾನೂನು-ಸಂವಿಧಾನಕ್ಕೆ ಸಂಬಂಧಪಟ್ಟ ಪ್ರಶ್ನೆಯಲ್ಲ. ಆದ್ದರಿಂದ ಕೇವಲ ವಕೀಲರು ಇದನ್ನು ಚರ್ಚಿಸಿದರೆ ಪ್ರಯೋಜನವಿಲ್ಲ. ರಾಜಕೀಯ ವ್ಯವಸ್ಥೆ ಸೋತಿದೆ ಅಥವಾ ಸರಿಯಾಗಿ ಹೇಳಬೇಕೆಂದರೆ ಬಿಕ್ಕಟ್ಟಿನಲ್ಲಿದೆ. ಯಾಕೆಂದರೆ ಅವರ ಆಧಾರವಾದ ಸಾಮಾಜಿಕ-ಆರ್ಥಿಕ ಧೋರಣೆಗಳು ಸೋತಿವೆ. ಕಾನೂನಿನ ಹಾಗೂ ಸಂವಿಧಾನದ ಚೌಕಟ್ಟು ಬದಲಾಗಬೇಕಾದರೆ ಈ ಬದಲಾವಣೆ ಸಾಮಾಜಿಕ-ಆರ್ಥಿಕ ವ್ಯವಸ್ಥೆಯಲ್ಲಿನ ಸೂಕ್ತ ಬದಲಾವಣೆಯನ್ನಾಧರಿಸಬೇಕು.

ಬಂಡವಾಳಶಾಹಿ ತೀವ್ರ ಹಾಗೂ ಸತತ ಬಿಕ್ಕಟ್ಟನ್ನು ಎದುರಿಸುತ್ತಿರುವ ಜಾಗತಿಕ ಇತಿಹಾಸದ ಈ ಘಟ್ಟದಲ್ಲಿ ಆಳುವ ವರ್ಗಗಳು ಅಂಗೀಕರಿಸಿದ ಬಂಡವಾಳಶಾಹಿ ಅಭಿವೃದ್ಧಿಯ ಮಾರ್ಗ ದೇಶವನ್ನು ಮತ್ತಷ್ಟು ಬಿಕ್ಕಟ್ಟಿನಲ್ಲಿ ಸಿಲುಕಿಸಿದೆ. ಸರಕಾರದ ಪ್ರತಿಯೊಂದು ಕ್ರಮವೂ ಜನತೆಯ ಸಂಕಷ್ಟಗಳನ್ನು ಹೆಚ್ಚಿಸುತ್ತಿದೆ ಎಂದು ಎಡ ಮತ್ತು ಪ್ರಜಾಸತ್ತಾತ್ಮಕ ಚಳುವಳಿಯಲ್ಲಿರುವ ನಾವು ಮೊದಲಿನಿಂದಲೂ ಹೇಳಿಕೊಂಡು ಬಂದಿದ್ದೇವೆ. ಆದ್ದರಿಂದ ಸರಕಾರದ ಮೂಲಭೂತ ಧೋರಣೆಗಳಲ್ಲಿ ಭಾರೀ ಪರಿವರ್ತನೆ ಆಗಬೇಕಾಗಿದೆ. ಈ ಮೂಲ ಪ್ರಶ್ನೆಯ ಬಗ್ಗೆ ಯಾವುದೇ ಸಾರ್ವಜನಿಕ ಚರ್ಚೆಯನ್ನು ನಾವು ಸ್ವಾಗತಿಸುತ್ತೇವೆ.

ಇಂತಹ ಚರ್ಚೆಗೆ ಆಡಳಿತ ಪಕ್ಷ ಹಾಗೂ ಅದರ ಬೆಂಬಲಿಗರು ಸಿದ್ಧರಿದ್ದರೂ ನಮ್ಮ ಸಂವಿಧಾನ ಜಾರಿಯಲ್ಲಿದ್ದ ಮೂವತ್ತು ವರ್ಷಗಳಲ್ಲಿ ಎದ್ದ ಎಲ್ಲಾ ಕಾನೂನು ಹಾಗೂ ಸಂವಿಧಾನಾತ್ಮಕ ಪ್ರಶ್ನೆಗಳನ್ನು ಒಳಗೊಳ್ಳುವಂತೆ ಚರ್ಚೆ ನಡೆಯಬೇಕೆಂದು ನಾವು ಒತ್ತಾಯ ಮಾಡುತ್ತೇವೆ. ಯಾಕೆಂದರೆ ವಕೀಲರ ಸಮ್ಮೇಳನದ ಸಂಘಟಕರು ಹಾಗೂ ಪ್ರಧಾನಮಂತ್ರಿಯವರು ಈ ಸಮಸ್ಯೆಯನ್ನು ಜನರ ಮುಂದಿಟ್ಟ ರೀತಿ ಅಪೂರ್ಣವಾಗಿದೆ.

ಉದಾಹರಣೆಗೆ ಸಂಸದೀಯ ಪ್ರಜಾಪ್ರಭುತ್ವದ ವಿರೋಧ ಪಕ್ಷಗಳವರು ಒಂದು ನೀತಿ ಸಂಹಿತೆಗೆ ಬದ್ಧರಾಗಿರಬೇಕೆಂದು ವಕೀಲರ ಸಮ್ಮೇಳನದ ಸಂಘಟಕರು ಹಾಗೂ ಪ್ರಧಾನ ಮಂತ್ರಿ ಬಯಸುತ್ತಾರೆ. ಆದರೆ ಆಡಳಿತ ಪಕ್ಷವೂ ಒಂದು ನೀತಿ ಸಂಹಿತೆಗೆ ಬದ್ಧವಾಗಿರಬೇಕೆಂಬ ಬಗ್ಗೆ ಚರ್ಚೆ ನಡೆಯದಿದ್ದರೆ ಮೇಲಿನ ಚರ್ಚೆ ಅಪೂರ್ಣವಾಗುವುದಿಲ್ಲವೇ? ಈ ಬಗ್ಗೆ ಅವರೇಕೆ ಸುಮ್ಮನಿದ್ದಾರೆ?

ಇಲ್ಲಿ ನಾವು ಆ ಮೂರ್ತವಾದ ಪ್ರಶ್ನೆಯನ್ನು ಎತ್ತಿಲ್ಲ. ಮೂವತ್ತು ವರ್ಷಗಳಲ್ಲಿ ಕಾಂಗ್ರೆಸ್ ಹಾಗೂ ಈಗ ಕಾಂಗ್ರೆಸ್ (ಐ)ನ ವರ್ತನೆಗಳಿಂದಾಗಿ ಈ ಪ್ರಶ್ನೆಗಳು ಎದ್ದಿವೆ.

ಈ ಬಗ್ಗೆ ಕೆಲವು ಸತ್ಯಾಂಶಗಳನ್ನು ಕೊಡೋಣ.

* 1957ರಲ್ಲಿ ಕೇರಳದಲ್ಲಿ ಕಾಂಗ್ರೆಸ್ ವಿರೋಧ ಪಕ್ಷವಾಗಬೇಕಾಯಿತು. ಅದಿನ ಆಡಳಿತ ಪಕ್ಷ (ಅವಿಭಜಿತ ಕಮ್ಯುನಿಸ್ಟ್ ಪಕ್ಷ)ದಲ್ಲಿ ಬಿಕ್ಕಟ್ಟು ತರಲು ವಿಫಲವಾದ ಮೇಲೆ ಕಾಂಗ್ರೆಸಲ್ಲ "ವಿಮೋಚನಾ ಸಮರ" ಆರಂಭಿಸಿತು. ಆ "ಸಮರ"ದ ಮುಖ್ಯ ವ್ಯಕ್ತಿ ಆಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಈಗಿನ ಪ್ರಧಾನ ಮಂತ್ರಿಯವರೇ. ಈಗ ಅವರು ವಿರೋಧ ಪಕ್ಷಗಳು ಯಾವ ತಪ್ಪುಗಳನ್ನು ಮಾಡಿವೆಯೆಂದು ಆಪಾದಿಸುತ್ತಾರೋ ಅವೆಲ್ಲಾ ತಪ್ಪುಗಳನ್ನು ಅವರು ಹಾಗೂ ಅವರ ಪಕ್ಷ ಆಗ ಮಾಡಿತ್ತು. ಇದು ನಡೆಯಬೇಕಾದ "ಸಾರ್ವಜನಿಕ ಚರ್ಚೆಗೆ ಒಂದು ವಿಷಯವಾಗುವುದೇ?

* ಒಂದು ದಶಕದ ನಂತರ 8-9 ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರಕಾರ ಬಂತು. ಈ ರಾಜ್ಯಗಳಲ್ಲಿ ಕೇಂದ್ರ ಸರಕಾರ ಹಾಗೂ ವಿರೋಧ ಪಕ್ಷವಾದಿ ಕಾಂಗ್ರೆಸ್ ಹೇಗೆ ಕೆಲಸ ಮಾಡಿತು? ಜಮ್ಮು-ಕಾಶ್ಮೀರದ ನ್ಯಾಶನಲ್ ಕಾನ್ಫರೆನ್ಸ್ ಸರಕಾರ ಹಾಗೂ ಅದರ ನಾಯಕ ಶೇಕ್ ಅಬ್ದುಲ್ಲಾರ ಬಗ್ಗೆ ಕೇರಳ, ಸರಕಾರದ ನೀತಿಯೇನು? ಈ ವಿಷಯಗಳನ್ನೂ "ಸಾರ್ವಜನಿಕ ಚರ್ಚೆಯಲ್ಲಿ ಸೇರಿಸುತ್ತಾರೆಯೇ?

* ಈಗ ಪಶ್ಚಿಮ ಬಂಗಾಳ, ತ್ರಿಪುರಾ, ಜಮ್ಮು-ಕಾಶ್ಮೀರ ಹಾಗೂ ಕೇರಳದಲ್ಲಿ ಕಾಂಗ್ರೆಸ್ (ಐ) ಯಾವ ರೀತಿ ವರ್ತಿಸುತ್ತಿದೆ? ಘನೀಖಾನ್ ಚೌಧುರಿ, ಸ್ಟೀಫನ್, ಮಕ್‌ವಾನಾ ಇತ್ಯಾದಿ ಕೇಂದ್ರ ಮಂತ್ರಿಗಳ ಅಸಂಖ್ಯಾತ ಹೇಳಿಕೆಗಳನ್ನು ವಕೀಲರ ಸಮ್ಮೇಳನದ ಸಂಘಟಕರು ಒಪ್ಪುತ್ತಾರೋ ಅಥವಾ ವಿರೋಧಿಸುತ್ತಾರೋ? ತ್ರಿಪುರಾದಲ್ಲಿ ಸಂವಿಧಾನಾತ್ಮಕವಾಗಿ ಚುನಾಯಿಸಲ್ಪಟ್ಟ ಸರಕಾರವನ್ನು ವಜಾ ಮಾಡಬೇಕೆನ್ನುವ, ಪಶ್ಚಿಮ ಬಂಗಾಳದಲ್ಲಿ "ಅಸ್ಸಾಂ ನಿರ್ಬಂಧನ" ಹಾಗೂ ಕೇರಳದಲ್ಲಿ ಆರ್.ಎಸ್.ಎಸ್.-ಭಾರತೀಯ ಜನತಾಪಕ್ಷ ಹಾಗೂ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಜತೆ ಸೇರಿ ಸರಕಾರ-ವಿರೋಧಿ ಚಳುವಳಿ ನಡೆಯುತ್ತಿರುವ ಕಾಂಗ್ರೆಸ್ (ಐ) ಬಗ್ಗೆ ಈ ಸಂಘಟಕರು ಯಾವ ನಿಲುವು ತಳೆದಿದ್ದಾರೆ?

ಈ ಎಲ್ಲ ಉದಾಹರಣೆಗಳಲ್ಲಿರುವ ಕಾನೂನಿನ ಹಾಗೂ ಸಂವಿಧಾನಾತ್ಮಕ ಪ್ರಶ್ನೆಯೆಂದರೆ ವಿರೋಧ ಪಕ್ಷಗಳು ಇಂದಿರಾ ಸರಕಾರದ ವಿರುದ್ಧ ಅಂದೀಕರಿಸಿದ್ದಾವೆ ಎನ್ನುವ ಚಳುವಳಿಯ ವಿಧಾನ"ವನ್ನು ಕೇಂದ್ರದಲ್ಲಿ ಆಡಳಿತದಲ್ಲಿರುವ ಪಕ್ಷವೇ ಅನುಸರಿಸಬಹುದೇ ಅಥವಾ "ವಿರೋಧ ಪಕ್ಷಗಳೂ ಅನುಸರಿಸಬೇಕಾದ ನೀತಿ ನಿಯಮಾವಳಿ" ಕಾಂಗ್ರೆಸ್(ಐ) ಆಡಳಿತದಲ್ಲಿರುವಲ್ಲಿ ಮಾತ್ರ ಅನ್ವಯವಾಗಿ ಅದು ವಿರೋಧ ಪಕ್ಷವಾಗಿರುವಲ್ಲಿ ತನ್ನ ಮನಸ್ಸಿಗೆ ಬಂದಂತೆ ವರ್ತಿಸಬಹುದೇ ಎಂಬುದು.

ವಿರೋಧ ಪಕ್ಷಗಳ ವಿರುದ್ಧ ಕಿರುಚಾಟ, ರಾಜಕೀಯ ವ್ಯವಸ್ಥೆಯ ಬದಲಾವಣೆಯ ಕೇಳಿಕೆ ಹಾಗೂ ಮೂಲಭೂತ ಹಕ್ಕುಗಳಿಗಿಂತ ನಿರ್ದೇಶಕ ಸೂತ್ರಗಳಿಗೆ ಆದ್ಯತೆಯ ಬಗ್ಗೆ ಮತ್ತೆ ಆರಂಭವಾದ ಮಾತುಗಳು, ಇವು 3 ವಕೀಲರ ಸಮ್ಮೇಳನದ ಸಂಘಟಕರ ಹಾಗೂ ಪ್ರಧಾನ ಮಂತ್ರಿಯ ಪ್ರಚಾರದ ಮುಖ್ಯಾಂಗಗಳು ನಮಗೆ ತುರ್ತು ಪರಿಸ್ಥಿತಿ ಹಾಗೂ ಅದರ ಮೊದಲ ದಿನಗಳನ್ನು ನೆನಪಿಗೆ ತರುತ್ತಿವೆ.

ಮೂಲಭೂತ ಹಕ್ಕುಗಳಿಗಾಗಲೀ, ನಿರ್ದೇಶಕ ಸೂತ್ರಗಳ ಆಶಯದ ಈಡೇರಿಕೆಗಾಗಲೀ ತಾವೇ ಹೋರಾಡಲೇಬೇಕೆಂಬುದನ್ನು ಜನರು ಬಹಳ ಕಷ್ಟ-ನಷ್ಟ ಅನುಭವಿಸಿ ಕಂಡುಕೊಂಡಿದ್ದಾರೆ. ಸಂಸದೀಯ ಮಂತ್ರಿಮಂಡಲ ಮಾದರಿ ವ್ಯವಸ್ಥೆಯಿಂದ ಅವರಿಗೇನೂ ಬೆದರಿಕೆಯಿಲ್ಲ. ಆದರೆ ಪ್ರಧಾನ ಮಂತ್ರಿಯ ಸುತ್ತಲೂ ಬೆಳೆದಿರುವ ಅಧಿಕಾರದಾಹದಿಂದ ಕೂಡಿದ ಜನರ ಕೂಟ ಈ ವ್ಯವಸ್ಥೆಯನ್ನು ದುರುಪಯೋಗಪಡಿಸಿಕೊಳ್ಳುವ ಬೆದರಿಕೆ ಅವರಿಗಿದೆ. ಒಮ್ಮೆ ಕಿತ್ತೆಸೆಯಲ್ಪಟ್ಟು ಮತ್ತೆ ಅಧಿಕಾರಕ್ಕೆ ಬಂದಿರುವ ಈ ಕೂಟ ಸಂವಿಧಾನಾತ್ಮಕ ಪ್ರಶ್ನೆಗಳ ಮೇಲೆ "ದೇಶವ್ಯಾಪೀ" ಅಥವಾ "ಸಾರ್ವಜನಿಕ" ಚರ್ಚೆಗಳನ್ನು ತಮ್ಮ ಯೋಜನೆಯ ಈಡೇರಿಕೆಗೆ ಸಾಧನವಾಗಿಸುತ್ತಿದ್ದಾರೆ.

●

"ವಿರೋಧ ಪಕ್ಷಗಳ ಅನೈಕ್ಯತೆ"

[1ನೇ ಪುಟದಿಂದ]

ಆಶಿಸಿದ್ದೆವು. ಆದರೆ ಇದು ಹುಸಿಯಾಯಿತು. ಈಗಲಾದರೂ ಕಾಲ ಮಿಂಚಿಲ್ಲ. ಸಂಬಂಧಿಸಿದ ಪಕ್ಷಗಳು ಯೋಚಿಸಿ, ಒಂದು ರೀತಿಯ ಹೊಂದಾಣಿಕೆ ಮಾಡಿಕೊಂಡಲ್ಲಿ, ಪ್ರಬಲ ಹೋರಾಟವನ್ನೆಸಗುವುದು ಸಾಧ್ಯ. ಎಡಪ್ರಜಾಪ್ರಭುತ್ವ ಅಭಿಪ್ರಾಯಗಳನ್ನು ಹೊಂದಿದವರೂ ಸ್ಫೂರ್ತಿಯಿಂದ ಭಾಗವಹಿಸುವುದೂ ಸಾಧ್ಯ. ಮತಗಳು ಹರಿಹಂಚಿ ಹೋಗದಂತೆಯೂ ಆಗಬಲ್ಲದು. ನವದೆಹಲಿಯಲ್ಲಿ ಜರುಗಿದ್ದ ಆರ.ಪಕ್ಷಗಳ ನೇತೃತ್ವದ ರಾಷ್ಟ್ರೀಯ ಸಮಾವೇಶದ, ಆಧಾರದಲ್ಲಿ ರಾಜ್ಯದಲ್ಲೂ ಸಮಾವೇಶ, ಸಂಘಟನೆ ಮತ್ತು ಜಂಟೀ ಹೋರಾಟಗಳತ್ತ ತನ್ನ ಪ್ರಯತ್ನವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಮುಂದುವರಿಸುವುದು ಎಂಬುದಾಗಿ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ. ಎಂ.ಕೆ.ಭಟ್ ಮತ್ತು ರಾಜ್ಯ ಸಮಿತಿ ಸದಸ್ಯ ಕಾಂ. ಎನ್. ಕೆ. ಉಪಾಧ್ಯಾಯ ಹುಬ್ಬಳ್ಳಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಘೋಷಿಸಿರುವರು. ○

ಕಾಂ. ಪಿ.ಸಿ. ಜೋಶಿ ನಿಧನ

ಖ್ಯಾತ ಸ್ವಾತಂತ್ರ್ಯ ಹೋರಾಟಗಾರ, ಭಾರತ ಕಮ್ಯುನಿಸ್ಟ್ ಪಕ್ಷ (ಸಿ ಪಿ ಐ.) ದ ಮುಂದಾಳುವೂ, ಅವಿಭಕ್ತ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದ ಕಾಂ. ಪಿ.ಸಿ. ಜೋಶಿ ತಮ್ಮ 72ನೇ ವಯಸ್ಸಿನಲ್ಲಿ ನಿಧನರಾದ ದುಃಖಕರ ವಾರ್ತೆ ಬಂದಿದೆ.

ಉತ್ತರ ಪ್ರದೇಶದ ಆಲ್ಮೋರ ಜಿಲ್ಲೆಯಲ್ಲಿ 1908ರಲ್ಲಿ ಜನಿಸಿದ ಕಾಂ. ಜೋಶಿ, 1926ರಲ್ಲಿ ವಿದ್ಯಾರ್ಥಿ ರಂಗದಿಂದ ರಾಜಕೀಯಕ್ಕೆ ಪ್ರವೇಶಿಸಿದರು. ಟೆಕ್ಸ್‌ಟೈಲ್, ಕಿಸಾನ್‌ಸಭಾ ಮುಂತಾದ ಸಂಘಟನೆಗಳಲ್ಲಿ ಮಹತ್ವದ ಪಾತ್ರವಹಿಸಿದ ಕಾಂ. ಪಿ. ಸಿ. ಜೋಶಿ ಸುಪ್ರಸಿದ್ಧ "ಮೀರಟ್ ಮೊಕದ್ದಮೆ"ಯಲ್ಲಿ ಬಂಧಿತರಾಗಿದ್ದರು.

ಇತ್ತೀಚಿನ ವರ್ಷಗಳಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದ ಕಾಂ. ಜೋಶಿ, ತಮ್ಮ ಹಿಂದೆ ಪತ್ನಿ (ಕಾಂ. ಕಲ್ಪನಾದತ್) ಹಾಗೂ ಇಬ್ಬರು ಮಕ್ಕಳನ್ನು ಅಗಲಿದ್ದಾರೆ.

ಕಾಂ. ಜೋಶಿ ನಿಧನಕ್ಕೆ ಐಕ್ಯರಂಗವು ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಸೋವಿಯೆತ್ ಯೂನಿಯನ್ನಿಗೆ ಶುಭಾಶಯ

1917 ನವೆಂಬರ್ 17. ನೂತನ ಸಮಾಜ ವ್ಯವಸ್ಥೆಗೆ ಅಡಿಗಲ್ಲಾದ ದಿನ. ಅಂದು ಜರುಗಿದ ರಶಿಯದ ಮಹಾನ್ ಕ್ರಾಂತಿ ವಿಶ್ವ ಇತಿಹಾಸ ಗತಿಯನ್ನು ಬದಲಾಯಿಸಿದ ಮಹತ್ವಪೂರ್ಣ ದಿನ. ಶೋಷಕರ ಶ್ರಂಖಲೆಯನ್ನು ಕಡಿದುಹಾಕಿ ಹೊಸ ಬದುಕಿಗೆ ಬುನಾದಿ ಹಾಕಿದ ರಶಿಯದ ಅಕ್ಟೋಬರ್ ಕ್ರಾಂತಿಯ ವರ್ಧಂತಿಯನ್ನು ವಿಶ್ವದಾದ್ಯಂತ ಆಚರಿಸಲಾಗುತ್ತಿದೆ. ಈ ನಿಮಿತ್ತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ಸೋವಿಯೆತ್ ಕಮ್ಯುನಿಸ್ಟ್ ಪಕ್ಷ (ಸಿ.ಪಿ.ಎಸ್.ಯು.)ಕ್ಕೆ, ಸೋವಿಯೆತ್ ಜನತೆಗೆ ತನ್ನ ಕ್ರಾಂತಿಕಾರಿ ಅಭಿನಂದನೆಗಳನ್ನು ಸಲ್ಲಿಸಿದೆ.

ಸಂಪಾದಕೀಯ

[1ನೇ ಪುಟದಿಂದ]

ಕೇರಳದ ವಿಧಾನಸಭಾ ಚುನಾವಣೆ ಸಮಯದಲ್ಲಿ ಜಾತಿ, ಮತ, ದೇವರು ಮತ್ತು ಧರ್ಮದ ಸಹಾಯದಿಂದ ಎಡ ಪ್ರಜಾಪ್ರಭುತ್ವ ರಂಗವು ಅಧಿಕಾರಕ್ಕೆ ಬರುವುದನ್ನು ತಡೆಗಟ್ಟಲು ಇಂದಿರಾ ನಡೆಸಿದ ಯತ್ನಗಳು ವಿಫಲವಾದುವು. ಈಗ ಕಾನೂನು ವ್ಯವಸ್ಥೆ ಸರಿ ಇಲ್ಲ, ವಿರೋಧ ಪಕ್ಷಗಳ ದಮನ ನಡೆಯುತ್ತಿದೆ ಎಂಬ ಪ್ರಚಾರಗಳ ಮೂಲಕವೂ, ಎಡ ಪ್ರಜಾಪ್ರಭುತ್ವ ಸರಕಾರದಲ್ಲಿ ಭಾಗವಹಿಸಿರುವ ಪಕ್ಷಗಳಲ್ಲಿ ಒಡಕುಂಟು ಮಾಡಲು ಪ್ರಯತ್ನಿಸುವುದರ ಮೂಲಕವೂ ಸರಕಾರವನ್ನು ಉರುಳಿಸಲು ಇಂದಿರಾಗಾಂಧಿ ಮತ್ತವರ ಬೆಂಬಲಿಗರು ನಡೆಸುವ ಯತ್ನಗಳನ್ನು ವಿಫಲಗೊಳಿಸುವುದರಲ್ಲಿ ಕೇರಳದ ಎಡ ಪ್ರಜಾಪ್ರಭುತ್ವ ಶಕ್ತಿಗಳು ಜನಬೆಂಬಲದಿಂದ ಯಶಸ್ವಿಯಾದಾವೆಂದು ಹಾರೈಸೋಣ ○

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT